ಎರಡು ನಾಟಕಗಳು

(ಅನುಕೂಲಕ್ಕೊಬ್ಬಣ್ಣ, ನಮ್ಕಳ್ಬು)

ಟಿ ಪಿ ಕೈಲಾಸಂ

ಕನ್ನಡ ಕಾವ್ಯಮಾಲೆ

ಎರಡು ನಾಟಕಗಳು

ಅನುಕೂಲಕ್ಕೊಬ್ಬಣ್ಣ ನಮ್ಕ್ಳಬ್ಬು

ಟಿ. ಪಿ. ಕೈಲಾಸಂ

ಕಾವ್ಯಾಲಯ: ಪ್ರಕಾಶಕರು : ಜಯನಗರ

ಮೈಸೂರು ೫೭೦ ೦೧೪

ERADU NATAKAGALU (Anukoolakkobbanna, Namklabbu)— Two plays in Kannada by T. P. Kailasam. Published by Chidambaram Kudali Krishnamurthy, Kavyalaya Publishers, Jayanagar, Mysore – 14; Phone : 0821-567042; e-mail : ckkkavyalaya@yahoo.com : New Edition : 2002.

ಬೆಲೆ ರೂ. 25

ಆಕರ:
https://archive.org/details/unset0000unse_k2j0/page/n1/mode/2up

ಓಸಿಆರ್ ಪರಿವರ್ತನೆ: ವಿಶು [https://vishwakoshaagaara.blogspot.com/]

ಮುದ್ರಣ:
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು ೫೭೦ ೦೧೪

ಅನುಕೂಲಕ್ಕೊಬ್ಬಣ್ಣ

“A Sister to ‘ssist ’er”

ಎಂಬ

Le bretal

ಇವರ ರೂಪಕವನ್ನು ಅತಿಕ್ರಮಿಸಿ

ಪಾತ್ರಗಳು

ಧೋಂಡೂ

ಗೆದ್ದಲು ಹಿಡಿದ ಹುತ್ತದಂತಿರುವ ಬಿಲವೊಂದನ್ನು "ರೂಮು" ಎಂಬ ಅಭಿದಾನವಿಟ್ಟು ಬಾಡಿಗೆಗೆ ಕೊಟ್ಟಿರುವ ಮನೆ ಮಾಲೀಕ.

ಖಯಾಲೀ ಕಪ್ಪಣ್ಣ

ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಒದೆದು ಮೇಲ್ಕಂಡ ಬಿಲವನ್ನು ಬಾಡಿಗೆಗೆ ತೆಗೆದುಕೊಂಡ ಭೂಪ.

ರಮ್ಢೋಲ್ ರಂಗಣ್ಣ

(ಕಪ್ಪಣ್ಣನ ಅಣ್ಣ)

ಜಟಕಾ : ಯಾಕೂಬ್

ಚಾಕರ : ರುದ್ರೂ

ದೃಶ್ಯ ೧

ಸ್ಥಾನ : ಧೋಂಡೂರಾಯನ ಮನೆ ಮುಂಭಾಗದಲ್ಲೊಂದು ಮುರುಕಲು ಕೋಣೆ

[Found Kappanna and Dhondoo Rao with a rope in his hand]

ಕಪ್ಪಣ್ಣ : ಬಾಡಿಗೇ ಇಲ್ದೇ, ಧರ್ಮಕ್ಕೇ, ಬಂದಿಳಿದಿದ್ದು ಇದ್ದಿದ್ದು ಇನ್ನ್ ಮುಂದಕ್ಕಿರೋದು, ಈ ಹಾಳ್ಕೋಣೇಲಿ?

ಧೋಂಡೂ : ಬಿಡಿಗಾಸಾದ್ರೂ ನೀವ್ ಬಿಚ್ಚಿದಾಗ ಬಾಡಿಗೇಗೇನೆ ಹೊರ್ತು, ಬಂದಿಳ್ದು ವಂದ್‌ವರ್ಷ ಆಗ್ತಾ ಬಂತು; ಬಂದ್ ದಿನದಿಂದ ನಮ್ಮನೇನೆಲ್ಲಾ ನಿಮ್ ಕಿರ್ಲಾಟದಲ್ಲೇ ಭರ್ತಿ ಮಾಡಿದ್ರೇ ಹೊರ್ತು, ಒಂದ್ ಕಾಸೂ ಬದ್ಲಾಯಿಸ್ಲಿಲ್ಲ, ಕೈಯಿಂದ ಕೈಗೆ. ಈ ರೂಮ್ಗೆ ಬೇರೆ ಒಬ್ಬಾತ apply ಮಾಡ್ತಿದಾನೆ. ಆತ್ನಿಗಾದ್ರೂ, ಬಿಡುವು ಮಾಡ್ಕೊಟ್ಟು ನನಿಗುಪ್ಕಾರ ಮಾಡ್ತೀರೋ ... ಇಲ್ಲಾ.. "ತಾನೂ ತಿಂದ, ಪರರ್ನೂ ಕೊಂದ" ಅಂತ ಈ ರೂಂನಲ್ಲೇ ಠಿಕಾಣಿ ಹಾಕ್ಕೊಂಡು, ಕಲಿಯುಗ ತೀರಿ ಮುಂದ್‌ಬರೋ ಕೃತಯುಗಾನ ಎದ್ರುನೋಡ್ತಿರ್ತೀರೋ... ಆ ಕೈಲಾಸಪತೀನೇ ಬಲ್ಲ! ಸದ್ಯ, ಈ ರೂಮಿನಬಾಬ್ತು, ಹನ್ನೆರಡ್ಕೈದ್ಲ ಅರವತ್ತ್ ರೂಪಾಯ್ನ ನನ್ಕೈ ಮುಟ್ಸೋವರ್ಗೂ, ಈ ನಿಂಪೆಟ್ಗೇನ ಕಾದು ಕಾಪಾಡೋ ಭಾರಾನ ನಾನಾಗೇ ವಹಿಸ್ಕೋಳ್ಳೋ ವರಾನ ಮಟ್ಗೆ ದಯಪಾಲ್ಸಿದ್ರೆ, ತೃಪ್ತೋಸ್ಮಿ!!

[ಕೈಯಲ್ಲಿರುವ ಹಗ್ಗದಿಂದ ಟ್ರಂಕನ್ನು ಕಟ್ಟಿ ಬಿಗಿದು ಗಂಟುಹಾಕಿ ಭದ್ರಿಸುವನು]

ಕಪ್ಪಣ್ಣ : ಏನು ಅಭಿದಾನ! ಈ ಬಿಲಕ್ಕೆ!... ಈ ತೂತ್ಗೇ... ರೂಮೇ? ವಿಶ್ವಕರ್ಮಾ ! ಮಯಾ ! ಡಕಣಾಚಾರೀ ! ಎಲ್ಲಿಧೀರ್ರೋ !!! ಪಂಚಭೂತಗ್ಳಲ್ಲೊಂದ್ನೂ ಬಿಡ್ದೆ.. ಗಾಜಿಲ್ದ ಕಿಟ್ಕಿಯಿಂದ ತೂರೋ ಮಣ್ಣೂನು, ಮಳೆ ಬಂದ್ರೆ ಸೋರೋ ಸೂರಿಂದ ಸುರಿಯುತ್ಲೋ... ಇಲ್ಲ... ನೆರೆಕೋಣೆ ನೀರ್ಮನೆಯಿಂದ ಬಿರದ ಗೋಡೆಯಿಂದ ಬೀಳುತ್ಲೋ, ಅಂಗಾಂಗಗಳಿಗೂ ರ್‍ಹೂಮೆಟಿಸ್ಮ್ ಟೈಫಾಯ್ಡ್ ಇತ್ಯಾದಿ ಜಾಡ್ಯಗಳ್ನ ಜಿಸಮ್ಗೆ ಜೋಮಾಲೆ ಹಾಕೋ ಜಲಾನ್ನೂ, ಹೆಂಚಿಲ್ದೆ ಆಕಾಶದ್ ತೇಜಸ್ನೂ ಬಾಕಲ್ ಬಿಲದ ಕಂಡಿಯಿಂದ ತೂರೋ ವಾಯೂನ್ನೂ ವಳಗೆ ತರ್ಸ್ಕೊಂಡಾದರ್ನೋ ಗೊಗ್ಗಯ್ನ ಗುಹೇಗೆ, ರೂಮೂ ಅಂತ ನಾಮ್ಕರ್ಣ ಮಾಡಿಧೀರಲ್ಲಾ ಅದಕ್ಕೇ ವಂದು special ನರಕ ನಿಮಿಗೆ!! ಇನ್ನೀ ನಿಮ್ಮನೇಗೆ ಕನ್ನಾಹಾಕಿದ ಕಳ್ಳನ್ನಾ, ಜಾತಿಭ್ರಷ್ಟನ್ಮಾಡ್ಹಾಕ್ಬಿಟ್ಟಾರು, ಅವನ್ನ್

ಕಸಬ್ನೋರು! –ಆಯ್ತೇ?? ಇನ್ನಿದಕ್ಕೆ ಬಾಡ್ಗೆ ಕೇಳೋನೋ, ಕೊಡೋನೋ, ಇಲ್ಲಿ ಇವರಲ್ಯಾರು ಮಹಾಪಾತ್ಕಿ ಅಂಬೋದ್ನ, ಯಮ–ಮುಂದಕ್ಕೆ ನಾವೂ, ನೀವೂ, ಸಂದಿಸ್ಲೇಬೇಕಾದ, ಆ ಯಮಧರ್ಮ–ಅವನೇ ನಿರ್ಧರಿಸ್ಬೇಕು! ...ಸದ್ಯ, ಈ ಬೊಕ್ಕೇನ್ನ್ ನಾನು ಬಾಡಿಗ್ಗೆ ತಕ್ಕೊಳ್ಳೋವಾಗ, ನನ್ ಚಿಕ್ಕಂದ್ನಲ್ಲಿ, ನಾನ್ ಸಾಕಿದ್ ಸಿಡುಬೆದ್ಸತ್ತ ಬೆಕ್ಕಿನ ಪಿಳ್ಳೇ ವದನಾನ ಜ್ಞಾಪ್ಸೋ ನಿಮ್ಮ್ ಮುಖಾವಲೋಕ್ನ ಮಾಡತ್ಲೇ ಇರ್ಬೇಕೂಂತೇನೂ ಇಲ್ಲ ನಿಮ್ ನಮ್ ಒಪ್ಪಂದ್ದಲ್ಲಿ!... ಈ ಡೊಗ್ರಿನ್ನ್ ದ್ವಾರ ದಾಟ್ಹೋಗಿ ಮಿಕ್ಕ್ಯಾವ ಪಾಪಿಗ್ಳಿಗಾದ್ರೂ ನಿಮ್ ಮೂತೀನ ತೋರ್ಸಿ ಹುಚ್ಹಿಡ್ಸಿ !... ...ಇನ್ನಿಲ್ಲಿ ನಿಂತ್ರೋ, ನನ್ರೇಗ್ಸಿ, ನನ್ಕೈಲ್‌ಮಾಡ್ಸೋ ಬ್ರಹ್ಮತ್ಯದ್ ಪಾಪ ನನ್ನ ಸೇರೋದಿಲ್ಲ!... ನಿಮ್ಮನ್ನೇ ಸೇರುತ್ತೆ! [ದಂತಾವಳಿಯನ್ನು ಕಟಕಟನೆ ಕಡಿದು, ಕನಲಿ, ಮುಷ್ಟಿಗಳನ್ನು ಬಿಗಿದು, ರಾಯನ ಅಂಜಿದ ಆಸ್ಯವನ್ನು ಸಮೀಪಿಸುತ್ತಲೂ, ಬೆದರಿದಾತನು ಹಿಮ್ಮೆಟ್ಟುತ್ತಾ ತಿರುಗಿ ತಿರುಗಿ ಹಿನ್ನೋಡುತ್ತಾ, ದ್ವಾರವನ್ನು ಸೇರಿ ನಿಷ್ಕ್ರಮಿಸುವನು.]

ಕಪ್ಪಣ್ಣ : (ಆತ್ಮಗತಂ) ಏನ್ wrethched fateoo ನಂದೂ !?... ಎಣ್ಣೆ ಬಂದ್ ಸುರಿಯೋ ಕಾಲಕ್ಸರಿಯಾಗಿ... ಕಣ್ರೆಪ್ಪೆಗಳ್ನ ಭದ್ರವಾಗಿ ಬಿಗೀತಿದಾನಲ್ಲಾ ಈ ಕಡುಪಾಪೀ ! ಒಳ್ಳೇ ಕೆರಿಯರ್ರೂ open ಆಗೋ ಪಿಸ್ಕಲಾಜಿಕಲ್ momentನಲ್ಲೇ happen ಆಗೋದು, ಇಂಥಾ catastrophyಸು!... Hundred rupees offeroo! ನನಗೇಂತ offerನೂ, offerಗೇಂತ ನನ್ನೂ ಜಂಟೀಮಾಡ್ದ ಆ ಜಗತ್ಸೃಷ್ಟ, ಇಲ್ಲಿಂದ ತಪ್ಪಿಸ್ಕೊಳ್ಳೋ ಜಾಣ ತನಾನೂ ಕೊಡಬಾರ್ದೇ!?... (ಜೋಬಿನಿಂದ newspaper cutting ತೆಗೆದು ಓದುತ್ತಾ)–“Wanted a first class comedian for the film !!... facial contortions essential. No good lookers need apply. Handsome remuneration to ugly applicants. Starting with Rs 100/- per mensem. Future prospects in the candidate’s own face. Apply in person, to—The Shooting Syndicate, Fade-out Buildings, Mandyar pet, Madras, call in the morning.”–ಈಗೇನ್ಮಾಡೋದು? ಮೈ ಮುಚ್ಕೋಕ್ ಬಟ್ಟೆಗ್ಳೋ ಅವನು ಹಗ್ದಿಂದ್ ಕಟ್ಟಿರೋ ಟ್ರಂಕ್ನಲ್ಲಿ! ಇನ್ನ್ ರೈಲ್ವೆ fareಓ ಲಪ್ಟಾಯಿಸಿದ್ರೇನೆ possibleoo!... ಈಗೇನ್ಮಾಡೋದೂ?

[Enter ಧೋಂಡೂರಾವ್, who collects all the pictures from the walls and takes them away muttering to himself, "ಮನೆ ಬಾಕ್ಲಿಲ್ದೆ ಬಿಡ್ಡಾಗಸಾದ್ರೂ ಬಾಳೋ ಒಬ್ಬ ಬಂಧೂನೂ ಇಲ್ದೆ ಬಿಟ್ಟೀವಾಸ, ಬಿಟ್ಟೀ ಗ್ರಾಸದಿಂದ ಬದುಕು ನೀಗಿಸ್ಕೊಳ್ಳೋ ಬದ್ಮಾಷುಗ್ಳು buildingಲಿರೋವಾಗ್ಯೆ ಭದ್ರ ಎಲ್ಲಿಧೆ?, ಭದ್ರ ?"]

ಕಪ್ಪಣ್ಣ : (muttering) ಏನೂ?! "ಮನೆ ಬಾಕ್ಲು ಬಿಡ್ಡಾಗಸೂ ಬಾಳ್ದ ಬಂಧುಗ್ಳು?" (His eyes flashing–"ಜ್ಞಾನೋದಯ") (ಪ್ರಕಾಶ). . ಏನ್ಹೇಳ್ದ್ರೀ ?!!... ಬಿಡ್ಡಾಗಸೂ ಬಾಳ ಬಂಧುಗ್ಳಿಲ್ದ ಬದ್ಮಾಷ್ನೇ ನಾನು ! ಹ್ಹು! ನಗ್ಗು ಬರುತ್ತೆ !... ನಾಲಕ್ಕೋಟಿ ರೂಪಾಯಿ ಬಾಳೋ ಜಹಗೀರ್ನೂ, ವರ್ಷಕ್ಕೆ ನಲವತ್ತಲಕ್ಷರೂಪಾಯ್ನ ಸಾಗುವಳೀನೂ, ಇನ್ನ್ ಅವನ್ಗೆ ಬಡ್ಡೀಲೇ ತಿಂಗ್ಲಿಗೇಳೋ ನಾಲಕ್ಲಕ್ಷರೂಪಾಯ್ನೂ ಇಟ್ಕೊಂಡು, ಖರ್ಚು ಮಾಡ್ದಾಗ್ಲೇ ಕಣ್ಕಣ್ ಬಿಡ್ತಿರೋ, ಸಕ್ಲೇಶ್ಪುರದ, ರಂಢೋಲ್ ರಂಗಣ್ಣ, ನನಗೊಬ್ಬ ಅಣ್ಣ ಇರೋವಾಗ್ಗ್ಯೆ... ಬಿಡ್ಡಾಗಸೂ ಬಾಳ್ದ ಬಂಧುಗ್ಳಿಲ್ದ ಬದ್ಮಾಷೂಂತ ನೀವ್ ನನ್ನನ್ನೋದ್ ಕೇಳಿ ನಗು ಬರತ್ತೆ ! ಅಲ್ದೇ, ಇನ್ನ್ ನಮ್ಮಣ್ಣಂಗೇ, ನಾನು–ಅವನ್ತಮ್ಮ–ಕಪ್ಪಣ್ಣ ಈ ಕಾಲರಾ ನಿವಾಸ್ದಲ್ಲಿ, ಕಾಸಿಲ್ದ ಕರುಣ್ವಿಲ್ದ ಕಟುಕ್ರ ಬಾಯಿಂದ–ಬದ್ಮಾಷು ಅಂತ ಅನ್ನಸ್ಕೊಳ್ಳೋದು, ಅವನ ಕಿವೀಗೇನಾದ್ರೂ ಬಿದ್ರೆ, ತತ್ತಕ್ಷಣಾನೇ ತಲೇತೂಗಿ, ತನುಮೇಲ್ನಾಶೇನೇ ಬಿಟ್ಬಿಟ್ಟಾನೂ ಅಂಬೋ ದುಃಖದಿಂದ, ಅಳೂನೂ ಬರುತ್ತೇ ! ಧೋಂಡೂ ರಾಯ್ರೇ ! ಅಳೂನೂ ಬರುತ್ತೇ !

ಧೋಂಡೂ : ಏನೂ ?! ನಿಮಗೊಬ್ಬಣ್ಣಾ ಬೇರೆ ಇದಾನೆಯೋ ಇಹಲೋಕ್ದಲ್ಲಿ... ಐಶ್ವರ್ಯವಂತಾ ? ಹಾಗಿದ್ದಿದ್ರೆ, ಒಡಹುಟ್ದೋನ್ನ, ಈ ಅವಸ್ಥೆಗೆ ಬಿಡ್ತಿದ್ನೇ ? ಅಲ್ಲೇ, ನೀವೂ ಕೂಡ ಆತ್ನ ಸಹಾಯ ಕೋರ್ದೇ ಹೀಗೆ ಕಂಗೆಡ್ತಿದ್ರಾ ??...

ಕಪ್ಪಣ್ಣ : (Sarcastically) ಅದೇ, ವ್ಯತ್ಯಾಸ ! ದೊಡ್ರಕ್ತದೋರ್ಗು cheap ರಕ್ತದೋರ್ಗೂ ! ಸ್ವಾತಂತ್ರ್ಯ–Independenceಊ ಅಂಬೋದು ನಮ್ಮ್‌ರಕ್ತದ್ಗುಣ ! ಹೆದರ್ನ್ಸ್ಯೇ, ಬೆದರ್ನ್ಸ್ಯೇ, ಗದರ್ನ್ಸ್ಯೇ, ಸಾಗ್ದಿದ್ರೇ ಕೈಕಟ್ಕೊಂಡು ಕಾಲ್ಹಿಡೀತಾ, ತಿರ್ಕೊಂಡ್ ತಿನ್ನೋ thin blodoo, ತಿಳೀ ರಕ್ತಾ ನಿಮ್ಮದು ; ಕೆಲವರ್ದು ! 'ಅಪ್ಪಿಂದಾಗ್ಲೀ, ಅಣ್ಣಿಂದಾಗ್ಲೀ ಅನುಭವ್ಸೋ ಅಮರತ್ವಕ್ಕಿಂತ್ಲೂ

ಸ್ವಾತಂತ್ರ್ಯ ಮಿಗಿಸ್ಕೊಳ್ಳೋ ಸನ್ಯಾಸಾನೇ ಮೇಲು' ಅನ್ತಾ ಸೂಚ್ಸೋದೇ ದೊಡ್ರಕ್ತದ ಗುರುತೂ ! ಸೈನೂ–ಎಸ್ ಐ ಜಿ ಎನ್ನೂ !! ಮತ್ತಿನ್ಯಾಕೆ, ಖಯಾಲೀ ಕಪ್ಪಣ್ಣಾಂತಿಟ್ಟಿರೋದು ನನ್ನೆಸ್ರು, ನನ್ ಕುಟುಂಬದಲ್ಲಿ ? . . . ನಮ್ಮಣ್ಣ ಹಗ್ಲೂ ಇರ್ಲೂ ನನ್ಕಣ್ಗೆ ಚಾಚ್ತಿರೋ ಅರ್ಧಸ್ವಾನ ಬಿಟ್ಟು, ಹೀಗೆ ಅಜ್ಞಾತವಾಸ ಮಾಡ್ತಿರೋದು ? ಈ ಐಹಿಕ ಸೌಖ್ಯಗ್ಳಲ್ಲಿ ಅಸಹ್ಯಪಟ್ಕೊಂಡು ನನ್ ಪರೋಕ್ಷಾನ್ನಾನ್ ಹುಡುಕ್ತಿದೇನೆ ಅಂಬೋದ್ನ, ಹಣದಿಂದ್ ಕೊಬ್ಬಿದ್ನನ್ ಬಂಧುಗ್ಳಿಗಾಗ್ಲೀ ಹೆಗ್ಗಣದ್ಬಿಲಗಳ್ನ ಬಾಡಿಗ್ಕೊಟ್ಟು, ಹೊಟ್ಟೆ ಹೊರ್ಕೊಳ್ಳೋ ಹುಳುಗಳ್ಗಾಗ್ಲೀ ಮಂದಟ್ಟೆಲ್ಲಾಗತ್ತೆ ? ಮುಖ್ಯ ಬಡುವ್ರು, ಬೊಂಬ್ಡಾ ಹೊಡೀತಾ, ಬಾರ್ಬಾರ್ಗೂ ಬಡ್ಕೋತಿರ್ತಾರೇ ಹೊರ್ತು . . . "ಭಾಗ್ಯಾ, ಭಾಗ್ಯಾ"ಂತ ... ಐಶ್ವರ್ಯ ಅಂತಸ್ತು, ರಕ್ತ, ಸಂತತೀ ಇರೋರ್ಗೆ ಅದ್ರ ಯೋಚ್ನೇನೇ ಇರೋದಿಲ್ಲ !!

ಧೋಂಡೂ : ಹಾಗಾದ್ರೆ ಅಷ್ಟು ಐಶ್ವರ್ಯವಂತ್ರಾದ್ರೆ, ಬಾಡ್ಗೆ ಅರುವತ್ರೂಪಾಯ್ಗೆ ಗತಿಯಿಲ್ದೆ ಕಣ್ಕಣ್ ಬಿಡ್ತಿರೋದು ನೀವೋ, ನಾನೋ ?

ಕಪ್ಪಣ್ಣ : ನನಗರವತ್ರೂಪಾಯ್ ಬೇಕೂಂತ್ನಾನೇನ್ ಬಿಡ್ತಿರೋದ್ಕಣ್ಣು?... ನೀವ್ತಾನೇ, ಗತಿಯಿಲ್ದೆ ಗಲಭೆ ಎಬ್ಸಿರೋದಿವತ್ತು ? ! ಹಾಗ್ನಿಮಗ್ಗತಿ ಇರೋ ಪಕ್ಷಕ್ಕೆ ಹಗ್ಗಾ ಹಾಕ್ಬಿಗದ್ ಬಿಮ್ಮನ್ಸ್ನೆ ತಬ್ಕೋಬೇಕ್‌ಯಾಕೆ ಆ bit of ಬೊಂಬಾಯಿತಗಡ್ನ ?... ನಮ್ಮಣ್ಣ, ರಂಡೋಲ್ ರಂಗಣ್ಣ, ಎಮ್ಮೆಗ್ಳ ಕೊಟ್ಗೇಗೆ ಸಾಂಬ್ರಾಣಿ ಧೂಪಾ ಹಾಕೋದ್ನೂ, ನಿಮ್ಮನೇ ತಲೇ ತಲೇನೇ ಎತ್ಕೊಂಡ್ಹೋಗೋ ಚರಂಡೀ ಘನಸುಗಂಧದ ಆಮೋದಾನೂ, ಹೋಲ್ಸಿದ್ರೆ ಕನಿಕರ ಬರುತ್ತೆ ! ಧೋಂಡೂರಾಯರೇ ! ಕನಿಕರ ಬರುತ್ತೆ ! ನಮ್ಮಣ್ಣ ರಂಡೋಲ್ ರಂಗಣ್ಣೇ, ನನ್ನೀ ಅವಸ್ಥೇನೋಡಿ, ಅವನ್ ಹೃದ್ಯದಲ್ಲುಟ್ಟೋ ಕನಿಕರಕ್ಕಿಂತಾ, ಕುಂಬಾರ್ಗುಂಡೀಲಿ ಕುಕ್ಕರಸ್ಕೊಂಡು, ಕುಬೇರ್ನ್ಹಾಗೆ ಮುಖ ಗಂಟ್ ಹಾಕ್ಕೊಂಡು, ನನ್ನ ಹೀಯಾಳಿಸ್ತೀರಲ್ಲಾ ! ಇದ್ರಿಂದ ಕನಿಕರ ಹುಟ್ಟುತ್ತೆ ! ನಿಂ ಪೈಸಾ ಇಲ್ಲದ ಪಟಾಟೋಪ ನೋಡಿ ಕನಿಕರ ಬರುತ್ತೆ !

ಧೋಂಡೂ : ಯಾರ್ಹತ್ರಲ್ರೀ, ಈ ಬಿಡಿಗಾಸ್ ಬಾಳದ್ಬಿಂಕ ? ರಂಡೋಲಂತೆ. ರಂಗಣ್ಣಂತೆ, ಕೋಟೀಶ್ವರನಂತೆ. ತಮ್ಮ ಹೊಟ್ಟೇಗಿಲ್ದೇ ಬಾಯ್ಬಾಯ್ ಬಿಡ್ತಾ ಇದಾನಂತೆ ! . . . ಯಾರ್ಹತ್ರಾರೀ, ಕೊಚ್ಕೊಳ್ಳೋದು, ಈ ನಿಮ್ಮ ಇಲ್ಲದಣ್ಣನ ಐಶ್ವರ್ಯದ ಪ್ರತಾಪಾನ . . . ಅಣ್ಣನೂ ಇಲ್ಲಾ ರಂಗಣ್ಣೂ ಇಲ್ಲ,

ಇನ್ ರಂಡೋಲ್ ರಂಗಣ್ಣೆಲ್ಲಿಂದ ಬಂತು. . . ಹೊರಗ್ಹೋಗಿ ಕೂಲೀನೋ ನಾಲೀನೋ ಮಾಡೀ, ನನಗ್ಕೊಡ್ಬೇಕಾದ್ರಲ್ಲಿ ಅರ್ಧಾನಾದ್ರೂ ತೆತ್ಬಿಟ್ಟು, ಈ ನಿಂ ಸೊಟ್ಬಿದ್ದ್ ಸಂದೂಕಾನ್ ಸಾಗಸ್ಕೊಂಡು ಹೋಗೋ ಯೋಚನೇನ್ ಬಿಟ್ಬಿಟ್ಟು, ಇಲ್ಲದ್ ಬಂಧುಗಳ ಹೆಗಲ್ಮೇಲೆ ಬಯ್ಸಿದ್ ಭಾಗ್ಯಾನ ಹೇರಸ್ತಾ, ಹೇರಸ್ತಾ, ಕನ್ಸುಗಳ್ನಾ ಕಲ್ಪ್ನಾ ಮಾಡ್ತಿದ್ರೆ ಹೊಟ್ಟೆ ತುಂಬುತ್ತೇ ? . . . ಹೊರಗ್ಹಾಕ್ದ ಎಂಜ್ಲೆಲೆ ಶೇಷಾನ ತಿಂದ್ನಾಯಿಗ್ಳು ಬಿಟ್ಟೆಂಜ್ಲಿಂದ ... ಹೊಟ್ಟೆ ತುಂಬುತ್ತೆ ?. . . ಅಲ್ಲ ಮತ್ತೆ ! ಮಾತ್ಬೆಳಸ್ತಾನೆ ಮನುಷ್ಯ ! ಗಂಡ್ಸು ! . . . ಕೆಲ್ಸ ಮಾಡೋಕೆ ಕೈಲ್ಹರೀದೇ !!...

(ನಿಷ್ಕ್ರಮಣ)

ಕಪ್ಪಣ್ಣ : (indignantly) (ಆತ್ಮಗತಂ) “ಕೈಲ್ಹರೀದೇ !” ಕಪ್ಪಣ್ಣನ್ಕೈಲ್ಹರೀದೇ ... ದೇವ್ರು ಗಾನಾ ಲಾಗಾಯ್ತ್ನಿಂದ ಬಿಟ್ಟ ಈ ಕೈನಾ ಇವತ್ತಾಗನಾ ಬಿಗ್ಡ್ಹ್ಡ್ರೆ... ತಿನ್ನಸ್ತೇನೇ. ತಿನ್ನಸ್ತೇನೇ, ಒಂಧ್ಹೋಕಾ, ಈ ಧೋಂಡೂರಾಯನ್ಗೆ ... ಇವನ್ಹಾಗೋ ಸುಸ್ತ್ನಾ ಸುಧಾರ್ಸ್ಲೋಕೆ ಸಂವತ್ಸಾರಾನೂ ಸಾಲ್ದ್ಹಾಗೇ... ಸತಾಯಿಸಿದ್ರೆ, ಸತ್ರೇನೋ, ಸಾಯ್ದಿದ್ರೇನೋಂತ... ರಂಡೋಲ್ ರಂಗಣ್ಣ ತಕ್ಮಟ್ಗೆ effectiveoo ಅಂತ್ಬಿಟ್ಟದ್ ಬಾಣಾನ; ಇನ್ನದ್ನೇ ಸುಳ್ಳೂಂತ ಇವನಂದ್ಮೇಲೇ, ಇವ್ನ್ಹೇಳ್ದಾಗೆ ಕನಸ್ನಲ್ಲಾದ್ರೂನೂವೇ, ರಂಗಣ್ಣೋಬ್ಬನ್ನ ಕಲ್ಪ್ಸಿ, ಇವನ್ಕಣ್ಣಿದ್ರೂಗೆ ಕರ್ತಂದೊಪ್ಸಿ, ಇವನ್ಕೈಲಿರೋ, ರೊಕ್ಕಾನೂ, ಬಟ್ಟೇ ಬರೇನೂ, ಈ ನನ್ heirloom of twisted tinooನೂ, ಈ ಕೂರೇ ತುಂಬಿದ್ ಕುಟೀರ್ದಿಂದ ಹೊರಗ್ಹಾಕ್ದಿದ್ಮೇಲೆ... film actor ಕಸಬ್ನಲ್ಲಿ, ನನ್ಗೇನು prospectsoo?... ರಂಗಣ್ಣಾ... ಅಣ್ಣಾ... ಖಾಸಾ ಅಣ್ಣ ! good!... therefore ಮೂಗು ಮುಖಾ ಎಕ್ಸ್ಟ್ರಾ ಹತ್ಹತ್ರಿರೋದು naturaloo ! ಮೀಸೆ. spectaclesoo ... ಕ್ರೇಪ್ಹೇರೂ, spirit gumoo ತಯಾರು... ಇನ್ನು voiceಓ! ಬೆಕ್ಕಿನ್ “ಮಿಯ್ಯಾವ್ನಿ”ಂದ ಸಿಂಹದ “ಊಫ್”ವರ್ಗ್ಗೂ, ಅವರೋಹಣ, ಆರೋಹಣ ಸಾಧ್ನೇ ಆಗಿದೆ. ಇನ್ನೇನೂ?... ಕೋಟು, ರುಮಾಲು, ಧಗ್ದಗಾಯ್ಸೋದೊಂದ್ ಧೋತ್ರ, ವಾಚ್ and chainoo . . . ಅದಕ್ಸುಬ್ಬು, ಸೊಗಸ್ಗಾರ್ ಸುಬ್ಬೂನೇ saviouroo... ಸೋಮ್ವಾರ... luckily ಕೋರ್ಟಿದೆ... ಎರವ್ಲು refuse ಮಾಡೋದು impossibleoo... ರೂಮ್ನಲ್ಲಿರೋದಿಲ್ಲ ಇಷ್ಟು ಹೊತ್ನಲ್ಲಿ... ಮುಂದಿನ್ಬಾಕ್ಲು ಬೀಗ ಹಾಕ್ಕೊಂಡ್ಹೋಗಿದ್ರೂನೂವೆ... mean fellow!– Luckily ಅಂದತ್ತೆ ಕಿಟ್ಕಿಯಿಂದ, ಅಗ್ನಿ... ಹಿಂದಲ್ಬಾಕಲಗ್ನಿ... ಇನ್ delay ಮಾಡೋದು dangerousoo...

(ಎದ್ದುನಿಂತು ಗಟ್ಟಿಯಾಗಿ) ಇನ್ನೀ ಬರಾಬಡ್ಡ ಬಿಕ್ನಾಸಿಗಳ್ಗೆ ಕೊಡ್ಬೇಕಾದ್ನ ಕೊಟ್ಟು ಈ ಭಿಕಾರಿಗ್ಳ ಸಹವಾಸಾನ ಬಿಡೋದೇ best thingoo. . . ದೊಡ್ಡ ಕುಲ್ದಲ್ಬುಟ್ಬೋದ್ನೆಗೆ best thingoo !

ಧೋಂಡೂ : (suddenly entering) ಯಾರ್ರೀ ಭಿಕಾರಿ ? ಯಾರ್ರೀ ಬಿಕ್ನಾಸಿ? ...

ಕಪ್ಪಣ್ಣ : ಯಾರೇನು ? ನಾಚ್ಕೆ ಹೇಚ್ಕೆ ಇಲ್ದೆ, ಕದ್ವಿಲ್ದ ಬಾಗ್ಲಿಂದ್ ನಿಂತು, ಕಿವಿಗೊಟ್ಟು, ಹೊಂಚ್ಕೇಳೋ ಹಲ್ಕಾಗ್ಳೇ ! . . . ಬಿಕ್ನಾಸಿಗ್ಳು, ಭಿಕಾರಿಗ್ಳು, ಇನ್ಯಾರು !? ನಾನ್ ಕಲೆಯೋದು ದೊಡ್ಮನುಷ್ಯ್ರೆಂದ್ಗೆ !!

ಧೋಂಡೂ : ಅದೆಲ್ಲ್‌ಸ್ವಾಮೀ, ತಾವ್ ಕಲೆಯೋದು, ದೊಡ್ಡ ಮನಷ್ಯ್ರೆಂದ್ಗೆ?

ಕಪ್ಪಣ್ಣ : ಇಲ್ಲಲ್ಲ ! ಈ ನಿಮ್ಮ ಗೆದ್ಲಿಹಿಡ್ದ್ ಹುತ್ತದಲ್ಲಲ್ಲ !! ದಾರೀ ಬಿಡಿ !

[exit precipitately]

ಧೋಂಡೂ : ಏನಂದ ? "ಗೆದ್ಲಿಹಿಡ್ದ್ ಹುತ್ತಾ" ಅಂದ ಅಲ್ವೇ ! ಇರ್ಲಿ. ಆದ್ರೂನೂ, ಇದ್ರಲ್ಲ್ ಇಷ್ಟ್‌ದಿನ ಸೇರ್ಕೊಂಡಿದ್ದ ಕಪ್ಪು ನಾಗರ್ಹಾವು ಹೊರಗ್ಹೊರಡ್ತಲ್ಲ. ಇದಕ್ಕೇ ಕಾದಿದ್ದದ್ ನಾನೂನು. ಇನ್ನು ಮನೇ ಸಾಮಾನುಗಳ್ನೆಲ್ಲಾ ಈ ಕೋಣೇಲೇ ತುಂಬಿಟ್ಟ್ ಬಿಟ್ಟು, ಬೇರೊಬ್ಬರ್ಗೆ ಬಾಡಿಗ್ಗ್ ಕೊಟಾಯ್ತೂಂತ ಹೇಳಿದ್ಮೇಲೆ, ಬಾಕೀ ಬಾಡ್ಗೇನ ತಂದ್ ಕೈಲಿಟ್ಟು, ಅವನ ಹಾಳ್‌ಪೆಟ್ಗೇನ ಬಿಡಸ್ಕೊಂಡ್ ಹೋಗೋವರ್ಗೂ ಅವನೀ ಮನೇ ಹೊಸ್ಲು ದಾಟೋ ಭಯ್ವಿಲ್ಲ.

[Brings back all the pictures he took away and deliberately and slowly hangs them up. ಅಲ್ಲದೇ ಮನೆಯ ಹಂಡೆಗಳನ್ನೂ, ಚೊಂಬುಗಳನ್ನೂ ಒಂದೊಂದಾಗಿ ತಂದಿಟ್ಟು, ಕೋಣೆಯನ್ನು ತುಂಬುವನು... (ನೇಪಥ್ಯೇ)... "ಕ್ಷಮ್ಸೀ, ಸಕ್ಲೇಶ್ಪುರ್ದ ಕಪ್ಪಣ್ಣೋರು, ಇಲ್ಲೇ ಅಲ್ವೇ ಇರೋದು ?"]

ಧೋಂಡು : ಇದ್ಯಾರಿದೂ ? ... ಈ ಪಾಪರ್ನ ಅವ್ರು, ಇವ್ರು, ಅಂತಾನೆ ! ... ಇವ್ನಿಗಿಂತ್ಲೂ double ಪಾಪರ್ರೇ, ಅದ್ಹೇಗೆ ?. . . (ನಿಷ್ಕ್ರಮಿಸುತ್ತಾ) ಇಲ್ಲ, ಸದ್ಯ ಮನೇಲಿಲ್ಲ–ಯಾರಯ್ಯಾ ನೀನು ? [ನಿಷ್ಕ್ರಮಿಸಿ . . . (ನೇಪಥ್ಯೇ) ಕ್ಷಮ್ಸಿ ಸ್ವಾಮಿ . . . ಯಾರು ನೀವು? . . . ಅಲ್ಲಾ ತಾವು? ಯಾವ ಕಪ್ಪಣ್ಣೋರು ?]

ಬಂದಾತ : (ಒಳಗಿನಿಂದ) ನೀವೇನೂ, ತಾವೇನೂ ? ನನ್ನ ಹಣೇಬರಹಕ್ಕೆಲ್ಲಾ ವಂದೇ. ಕಪ್ಪಣ್ಣೋರು . . . ಸಕ್ಲೇಶ್ಪುರ್ದ ಕಪ್ಪಣ್ಣೋರು, ಇಲ್ಲಿದಾರ್‍ಯೇಂತ ತಿಳ್ಕೊಳ್ಳೋಕ್ ಬಂದದ್ದ್ ನಾನು. ಕ್ಷಮ್ಸಿ

ಧೋಂಡು : ವಳಕ್ಕ್ ಬನ್ನೀ ಸ್ವಾಮಿ ... ವಳಕ್ಕ್ ಬನ್ನಿ. [Ushers in a gentleman, be-mustached, be-turbaned, be-coated, be-spectacled and bearing, in spite of his distinguished personality and dignified manners, a not too distant a resemblance in point of nose, eyes, height and build to the erstwhile, behind-in-rent tenant, of Dhondu]

ಬಂದಾತ : ಕ್ಷಮ್ಸಿ ! ನನ್ ಸಾರೋಟು, ಈ ಓಣಿ ಮೂಲೇಲಿ ಕಾದಿದೆ. ಈ ಮಳೆ ಚಳಿ ಮಿಶ್ರವಾದ ಹವ್ದಲ್ಲಿ ಕುದ್ರೆಗಳ್ಗೆ ಗಂಟ್ಲು ಕಟ್ಕೊಂಡ್ ಬಿಡುತ್ತ್ವೋ ಏನೋಂತ ಹೆದರ್‍ಕೆ... ಕುದ್ರೆಗ್ಳು, ಪಂದ್ಯದ್ ಕುದ್ರೆಗ್ಳು... ನಾಜೋಕು... ಅಷ್ಟೆ ಅಭ್ಯಂತ್ರ ವಳಗ್ಗ್ ಬರೋಕೆ! ಹೌದೂ, ಇದೇನ್ ಕೋಣ್ಯೇ, ಉಗ್ರಾಣ್ವೇ... ಕ್ಷಮ್ಸಿ... ಕೇಳ್ಬಹುದೇ ?

ಧೋಂಡೂ: ನಾಚ್ಕೆ, ಹೇಳ್ಕೊಳ್ಳೋಕೆ. ಇದು ಕಪ್ಪಣ್ಣೋರ ರೂಮು, ಬೆಡ್ರೂಮು! ನನ್ ತಪ್ಪಲ್ಲಾ, ಅವರ್‍ದ್ದು.

ಬಂದಾತ : ಅಲ್ದೇ ಏನು ? ಅವನ್ನ, ನನ್ನತಮ್ಮನ್ನ ! ನನಗ್ಗೊತ್ತಿಲ್ಲವೇ ! ಉಗ್ರಾಣದ ಸಾಮಾನು ತುಂಬಿದ್ರೇನೇ ಬೆಡ್‌ರೂಮು ಅವನ್ಗೆ ! ವಲೆ ಇತ್ಯಾದಿಗಳು ಇದ್ರೇನೇವೇಯೇ, ಆಫೀಸು ಅವನ್ಗೆ ; ಮೇಜು, ಡೆಸ್ಕು, ಕುರ್ಚಿಗ್ಳಿದ್ರೇನೇ ಅಡ್ಗೇಮನೇ ಅವನ್ಗೆ ! ನಂ ಕಪ್ಪು ನನಗ್ ಗೊತ್ತಿಲ್ವೇ ! (ರೂಮನ್ನು

ಸುತ್ತಮುತ್ತಲೂ ನೋಡುತ್ತಾ) ಇದೆಲ್ಲಾ ನೋಡ್ಯೇ ಹೆಸ್ರಿಟ್ಟದ್ದು ನನ್ ತಮ್ಮನ್ಗೆ "ಖಯಾಲಿ ಕಪ್ಪಣ್ಣಾಂ"ತ. ಒಳ್ಳೇ ಚನ್ನಾಗಿ ಹೊಂದತ್ತೆ, ಬಿರ್ದು ನನ್ತಮ್ಮಂಗೆ... (ಅನ್ನುತ್ತಾ, ಚಿನ್ನದ ಗಡಿಯಾರವನ್ನು ತೆಗೆದು ಗಂಟೆಯನ್ನು ನೋಡುವನು)

ಧೋಂಡೂ : ಏನು !? ಅಲ್ಲಯ್ಯ... ಅಲ್ರಿ ! ... ಅಲ್ಲ ಸ್ವಾಮಿ... ಅಲ್ಲ, ಮಹಾಸ್ವಾಮಿ ! ಕಪ್ಪಣ್ಣೋರು ತಮ್ಮ ತಮ್ನೇ? ಅದ್ಹೇಗೇ, ತಮ್ಗೂ ತಮ್ತಮ್ಮನ್ಗೂ ತಾರತಮ್ಯ ...!?

ಬಂದಾತ : ಅದಕ್ಕೇ "ಖಯಾಲೀ"ಂತ ಅನ್ನೋದು ನಮ್ ಕಪ್ಪೂನ, ಹುಟ್ಟಿದಾರಭ್ಯ!... ನನ್ನ ಸ್ವಭಾವ ನೋಡಿ, ನನ್ನ ತಂದೆತಾಯಿಗಳ ಹಾಗೆ ! ನಂ ಕಪ್ಪೂ, ಸ್ವಭಾವ್ದಲ್ಲಿ, ನಮ್ಮಾತ ಬೆಂಕೀ ಭೀಮಣ್ಣೋರ ರಕ್ತ ಉಕ್ಕೀ, ಉಕ್ಕೀ, "ರಂಡೋಲ್ ರಂಗಣ್ಣ"–ನನ್ಹೆಸ್ರು–ಸಕ್ಲೇಶ್ಪುರದ್‌ಕಡೆ ನನ್ಹೆಸ್ರು–ರಂಡೋಲ್ ರಂಗಣ್ಣ, ತನ್ನ ಪಿತರಾರ್ಜಿತ ಸ್ವತ್ತ ಇಟ್ಕೊಂಡು ಅನುಭವ್ಸೋ ಪ್ರಭುತ್ವಕ್ಕಿಂತಾ, ಅವನ್ತಮ್ಮ ಸ್ವತ್ತ ಅರ್ಧಸ್ವದ್ ಹಕ್ಕೂ ವದರ್ಬಿಟ್ಟು, ಹರಕಲ್ ಧೋತ್ರ ಸುತ್ಕೊಂಡು, ಮುರುಕಲ್ ಮನೇಲಿದ್ಕೊಂಡಿದ್ರೂನೂವೆ, ಅವನು ಬೀರೋ ಬಿಂಕಾನೂ, ಬಡಾಯೂ ಧೋರಣ್ಯೂ, ನಮ್ತಾತ ಬೆಂಕಿ ಭೀಮಣ್ಣೋರ ಸ್ವಭಾವ ಅವ್ನಲ್ಲೇ ಕಂಡ್ಬರತ್ತೇಂತ, ನಮ್ಕಡೆ... ನಂ ಸೀಮೇ, ಕಡೆ . . . ಸಕ್ಲೇಶ್ಪುರದ್ಕಡೇ, ಖಯಾಲೀಂತಾ ಬಿರುದಂಟ್ಸಿದ್ದು ನನ್ತಮ್ಮ ಕಪ್ಪಣ್ಣನ್ಹೆಸರಿನ್ಮುಂದೆ . . .

ಧೋಂಡೂ : ಕ್ಷಮಿಸ್ಬೇಕು. ಮಹಾಸ್ವಾಮಿ ಕೂತ್ಕೊಳ್ಳಿ, ಆ ಕಬ್ಬಿಣದ್ ಕಡಾಯಿ ಥೇ, ಆ ತಾಮ್ರದ... ಅಲ್ಲ... ಆ ಕಂಚು... ಒಳ್ಳೇ ಕಂಚು ಗ್ಯಾರಂಟಿ ಅಂತಾರಲ್ಲ, ಅದು, ಆ ಕಂಚಿನ್ಕವಳ್ಗೇ ಮೇಲೆ ಕೂತ್ಕೊಳ್ಳಿ, ಅಲ್ಲ, ಅದ್ನ ಅಲಂಕರ್ಸಿ ! ನಾಚ್ಕೆ ಆಗುತ್ತೆ, ಹೇಳ್ಕೊಳ್ಳೋಕೆ, ಅಲ್ಲಾ, ಅರ್ಕೆ ಮಾಡೋಕೆ, ಆದ್ರೂನೂವೇ ತಮ್ತಮ್ಮ ಖಯಾಲೀಂತ ಹೇಳೋ ಅಧಿಕಪ್ರಸಂಗ್ತನ ನನ್ಬಾಯಿಂದ ಹೊರಡದಿದ್ರೂನೂವೆ, ನನ್ನ ಮನಸ್ಸೂ ಹೊಳದದ್ದಕ್ಕೊಂದು ದೃಷ್ಟಾಂತ ಹೇಳ್ತೇನೆ . . . ಮೇಜು, ಕುರ್ಚಿ, ನಿಲುಗನಡಿ, ಜಮಖಾನ, ಸೋಫಾ, ಇತ್ಯಾದಿಗಳು ಇರೋ ಕೋಣೇನಾ, ಅಲ್ಲ ರೂಮ್ನಾ, ಆತ್ನ ಸುಫರ್ದಿಗೆ ಅರ್ಪಿಸಿದ್ರೆ, ಈ ಕೋಣೇನೇ ಬೇಕೂಂತಾರಾತ ! ಇನ್ನು ಹುಗ್ಗಿ, ಬಿಸ್ಬೇಳೇ ಅನ್ನ, ಚಿತ್ರಾನ್ನ, ಇವುಗಳನ್ನ ಗುಡ್ಡಾ ಕಟ್ಟಿ, ಮೇಲಿಟ್ಟ ಜಿಲೇಬಿ, ಚಿರೋಟಿ, ಮಂಡ್ಗೆ, ಫೇಣೀನೂ ಪೇರ್ಸಿ ಸಾಲದ್ದಕ್ಕೆ ಸುರಳ್ಹೋಳೀನೂ ಜೋಡ್ಸಿ, ಕೈಕಟ್ಕೊಂಡು, ದಯಪಾಲಿಸಿ, ನಮ್ಮ ಹಸಿವಿಗಾದ್ರೂ, ನಮ್ಮ

ಸಂತೋಷಕ್ಕಾದ್ರೂ, ಇವುಗಳ್ನೆಲ್ಲಾ ಒಪ್ಪಸ್ಕೊಂಡು, ಈ ಅಡಿಗೇನೆಲ್ಲ ಅಟ್ಟಿದ್ ನನ್ನ ಗೃಹಿಣೀ ಕೆಲ್ಸ ವ್ಯರ್ಥ್ವಾಗದ್ದಕ್ಕಾದ್ರೂ, ವಪ್ಪಸ್ಕೋಬೇಕೂಂತ ಕೇಳ್ಕೊಂಡ್ರೆ, ದಂಪತಿಗಳು ನಮ್ಮಿಬ್ಬರ್ನೂ ತಾತ್ಸಾರಮಾಡಿ "ನನ್ಯೋಗ್ತೇಗೆ ಈ ಕೋಣೇನೇ ಸಾಕು, ತಂಗ್ಯನ್ನಾನೇ ಸಾಕೂ"ಂತ, ತಮ್ಗಾಗೆ, ಅವರ್ಮುಖದಲ್ಯೂ ಹೊಳ್ಯೋ ಮಹಾಲಕ್ಷ್ಮೀ ಕಳೇನ ಸುಳ್ಳ್ ಮಾಡೋಕೆ ವ್ಯರ್ಥ ಪ್ರಯತ್ನಮಾಡೋ ತಮ್ಮ ತಮ್ಮ–ಅಲ್ಲ–ಅನುಜರ್ನ, ಖಯಾಲೀಂತ ತಾವಂದದ್ದು ಅತಿಶಯೋಕ್ತಿ ಅಲ್ಲಾಂತ್ ಹೇಳೋಕೆ, ತಮ್ ಸೇವಕ್ನಾದ ನನ್ಗೆ, ಯೋಗ್ತೈ ಇಲ್ಲ–(ರಂಗಣ್ಣನು ಹಣೆಯನ್ನು ಬಡಿದುಕೊಳ್ಳುವುದನ್ನು ಗಮನಿಸಿ) ಇದ್ಯಾಕ್ ಮಹಾಸ್ವಾಮಿ ??

ರಂಗಣ್ಣ : ಯಾಕೇನು ! ? ಈ ಖಯಾಲೀ ತಮ್ಮ ಹೀಗ್ ಕಂಗೆಡ್ತಿದ್ರೆ, ನಮ್ಮ ತಾಯಿ ಗತಿಸ್ದಾರಭ್ಯ, ನಾನು ಕೈಕೊಂಡ ಜವಾಬ್ದಾರೀನ ತೀರ್ಸೋ ಬಗೆ ಹ್ಯಾಗೇಂತ ಬಡ್ಕೊಳ್ತಿಧೇನೆ, ನನ್ನಹೇನ ... ಗಂಡ್ಸು ಹಿಗ್ಗೋಳಾಡೋದ್ ತರವಲ್ಲ ! ಆದ್ರೂ ಗುಂಡ್ಗೆತುಂಬಾ ಕಟ್ಕೊಂಡಿರೋ ನನ್ ದುಃಖಾನ ಗುಟ್ಟಾಗಿಟ್ಕೊಂಡ್ ಕೊಬ್ಸೋದು, ನನ್ಮೈಗೂ ವಳ್ಳೇದಲ್ಲ, ಮನಕ್ಕೂ ವಳ್ಳೇದಲ್ಲ ... ಕಪ್ಪೂನ್ಮೇಲೆ ವಿಶ್ವಾಸ, ಕರುಣೆ, ಇರೋ ನಿಮ್ಮುಂದೆ ಕಕ್ಡೇ ನನ್ ಕೊರ್ತೇನ ಇನ್ಯಾರಮುಂದ್ತಾನೆ ಕಕ್ಕಿ ಶಾಂತಿಪಡ್ಕೊಂಡೇನು ನನ್ಮನಸ್ಗೆ... ನಾಲ್ಕುವರ್ಷಾನೂ ತುಂಬ್ದ ಬಾಲ್ಕ ನಾನಾಗ . . . ಕೈಕೂಸು ಕಪ್ಪು... ಅಂತ್ಯಕಾಲ ಅಮ್ಮನ್ಗೆ; ಆ ಕೂಸಿನಂಗೈನೂ ನನ್ನಂಗೈನೂ ಜೋಡ್ಸಿ... ಅವಳೇನೆ ಉಸಿರ್ನಲ್ಲಿ ಹೇಳ್ಕೊಂಡು. . . ಅಮ್ಮಾ... ಅವಳಾಶೇನ . . . "ರಂಗೂ . . . ಹೋಗ್ತಿಧೇನೆ. ನನ್ ಪರ್ಲೋಕದ್ಗತೀಗಿಂತ, ಇಹ್ಲೋಕ್ದಲ್ಲಿ ಬಿಟ್ಹೋಗೋ ಈ ಕೂಸ್ನ ಮುಂದಿನಗತೀನೇ ಮುಖ್ಯ ನನ್ಗೆ. ನಿನ್ಗೀಗ ವಯಸ್ ಚಿಕ್ಕಾದ್ರೂ, ಬುದ್ಧಿ ಚಟವಟ್ಕೆ ಹೆಚ್ಚು, ನನ್ಕಂದ... ಸಾಯೋವರ್ಗೂ. ನಿನ್ನೀ ಸಹೋದ್ರನ್ಗೆ ತಂದೆ ತಾಯಿ, ಬಂಧು ಬಳಗ, ಗುರು, ಸ್ನೇಹ್ತ, ಸರ್ವಸ್ವೂ ನೀನೇ ಅಂಬೋದ್ನ ಮರೀ ಬೇಡ್ನನ್ ಕಂದಾ. ಮರಣಾಂತ್ವೂ ಮರೀಬೇಂಡಾ"ಂತ ನನ್ ತಬ್ಕೊಂಡು, ಕಪ್ಪೂನ ನನ್ಕೈಲಿಟ್ಟಿಟ್ಟು, ಇಹ್ಲೋಕ್ದಿಂದ್ ಹೋದ್ಳು . . . ನಮ್ಮಮ್ಮ ನಮ್ಮಪ್ನೋ, ಇದನ್ನೋಡಿ ಕೊರ್ಗೀ, ಕೊರ್ಗೀ ಅಮ್ಮ್ ಸತ್ತಾರು ತಿಂಗ್ಳಲ್ಲೇ ಅವ್ನೂ ಸತ್ತ... ಆಗ್ನಿಂದಾ ನೋಡ್ರಿ ಈಗಿನ್ವರ್ಗೂ, ನಾನೇ ಕಪ್ಪಣ್ಣಾಂತ ತಿಳ್ಕೊಂಡು ಬದ್ಕಿದೇನೆ ಹೊರ್ತು, ರಂಗಣ್ಣ ರಂಡೋಲ್ ರಂಗಣ್ಣಾ ಅಂತ–ನಿಮ್ಮಂಥವರ ಮುಂದೆ ನಟಿಸ್ಬೇಕಾಗಿದ್ಯೇ ಹೊರ್ತು, ನಮ್ಮಮ್ ಸತ್ತಾಗ್ನಿಂದ ನಾನೇ ಕಪ್ಪಣ್ಣನ್ನಾಗೇ ಭಾವಿಸ್ಕೊಂಡಿದೇನೆ,

ಈಗ... [ಎಂದು ಬಿಕ್ಕಿ ಬಿಕ್ಕಿ ಅಳುತ್ತ, ಜೊತೆಯಲ್ಲಿಯೂ ಬಿಕ್ಕಿ ಅಳುವ ಧೋಂಡುವಿನ ಹೆಗಲ ಮೇಲೆ ತಲೆಯನ್ನು ಇರಿಸುವನು.]

ಧೋಂಡೂ : (ರಂಗಣ್ಣನನ್ನು ಎರಡು ಕೈಯಿಂದಲೂ ತಬ್ಬಿಕೊಂಡು ಬಾಷ್ಪಧಾರೆಯನ್ನು ಕಾರುತ್ತಾ) ಸ್ವಾಮಿ, ಸಂತೈಸ್ಕೊಳ್ಳಿ, ಸಂತೈಸ್ಕೊಳ್ಳಿ ... ಈ ನಿಮ್ಮ ತಮ್ಮನ್ನ, ಆತ್ಮಂತಸ್ತ್ಗೂ, ತಮ್ಮ್ ಮನಶ್ಯಾಂತಿಗೂ ಸರಿಯಾಗ್ ತರೋಕೆ, ಸಹಾಯಮಾಡ್ಬೇಕೂಂತ ತಯಾರಾಗಿರೋ, ಧೋಂಡೂರಾಯ ನಾನಿರೋವಾಗ್ಯೆ, ನೀವ್ ಹೀಗೆ ನನ್ಮನೇಲಿ ಕಣ್ಣೀರ್ ಸುರ್ಸ್ತೋದು, ನನ್ನ ಹೃದ್ಯಾನ ಕರಗ್ಸತ್ತೆ ; ಅಲ್ದೆ ಹೀಗೆ ಕಣ್ಣೀರ್‌ಸುರ್ಸ್ತೋದು ಕಮ್ಮಿ ! ಮಹಾಸ್ವಾಮೀ, ನನಗ್ ತಮ್ಮೇಲೂ ತಮ್ಮ ತಮ್ಮನ್ ಮೇಲೂ ಇರೋ ಅಭಿಮಾನಕ್ಕೆ ಕಮ್ಮಿ !!

ರಂಗಣ್ಣ : ಧೋಂಡೂ–ಇನ್ಮೇಲ್ ನಿನ್ನ, ರಾಯ್ರೇ ಅಂಬೋದು ಅಪ್ಮಾನ. ನಿನ್ಗೂ ನನ್ಗೂ. . . ಕಪ್ಪೂನ ಕಾಪಾಡೋ ಭಾರಾನ್ವಹಿಸ್ಕೊಂಡಿರೋ ನಮ್ಮಿಬ್ರಿಗೆ ಈಗ್ಹುಟ್ಟಿರೋ ಪರಸ್ಪರ ಅನುರಾಗ ಬಂಧಕ್ಕೂ ಅಪ್ಮಾನ, ಧೋಂಡೂ, ಅಪ್ಮಾನ . . . ಕಪ್ಪೂನ್ ಕಾಪಾಡೋದಕ್ಕೆ ವಂದೇ ದಾರೀ; ಯಾವ್ದಾರೀನ ನನ್ ಹಿರಿಯ್ರು, ನನ್ನಿಂದ ಹಿಡ್ಸಿದ್ರೋ . . . ನೀವ್ ಯಾವ್ದಾರೀನ್ ಹಿಡಿದ್ರೋ, ಅದೇದಾರಿ . . . ಮದ್ವೆ, ಗೃಹಸ್ಥಾಶ್ರಮ . . . ಜವಾಬ್ದಾರಿ . . . ಮನೆ, ಮನೆ ಯಾಕೆ, ಮಕ್ಳು, ಕಷ್ಟ, ಸುಖ, ಗೀತೇಲ್ ಹೇಳೋಹಾಗೆ "ಲಾಭಾಲಾಭೌ ಜಯಾಜಯೌ" . . . ಕಪ್ಪೂ ತನ್ನ ಜವಾಬ್ದಾರೀನ ತಾನೇ ವಹಿಸ್ಕೊಂಡು, ತನ್ಕುಲ, ತನ್ಗೋತ್ರ, ತನ್ರಕ್ತ, ಇತ್ಯಾದಿಗಳಿಗೆ ಅನುವಾಗಿ ತನ್ನಂತಸ್ತನ್ನ ಕಾಪಾಡ್ಕೊಳ್ಳೇಬೇಕೂಂಬೊ ಜವಾಬ್ದಾರೀನ ಧೋಂಡೂ, ನಮ್ಮಿಬ್ರ ಜವಾಬ್ದಾರೀನೂ ಬಿಡಿಸ್ಕೊಂಡು, ನಿಶ್ಚಿಂತ್ಯಾಗಿ, ನಮ್ಮಿಬ್ರ ಸರ್ವಸ್ವಕ್ಕೂ ಸಮ್ಭಾಗಿಯಾಗಿ ಸಕ್ಲೇಶ್ಪುರ್ದಲ್ಲಿ ಸಕುಟುಂಬ ಸಂತೋಷ್ಪಡೋಕೆ ವಂದೇ ದಾರಿ... ಕಪ್ಪೂಗ್ ಮದ್ವೆ. . . !!!

ಧೋಂಡೂ : ಹೌದ್‌ಸ್ವಾಮಿ . . . ಆತ್ನಿಗೂ ವಯಸ್ಸು. . . ಬುದ್ಧಿ... !

ರಂಗಣ್ಣ : ವಯಸ್ಸು, ಬುದ್ಧಿ, ದೇವ್ರೇಗತಿ ! ಅವ್ನ ಐದ್ನೆ ವಯಸ್ನಲ್ಲೇ ನಂ ಸೋದರ್ಮಾವನ್ ಮಗಳ್ನ ನಿಶ್ಚಯಿಸ್ದಿದ್ರು ಹಿರಿಯ್ರು. . . ಈ ಗಂಟ್ನ ತಪ್ಪಿಸ್ಕೊಳ್ಳೋಕೆ ಎಂಥೆಂಥಾ ಘಟ್ಟಿಗ್ತನ ತೋರಿಸಿಧಾನೇಂತ

ಕೇಳಿಧೀರಾ!! ಅಯ್ಯಯ್ಯೋ !! . . . ಈಗಾ ಹುಡ್ಗಿ ಓದಿ S. S. L. C. First classನಲ್ಲಿ ಪ್ಯಾಸ್ಮಾಡ್ಬಿಟ್ಟಿಧಾಳೆ. . . ಇವ್ನೋ, B. A. ವರ್ಗೂ ಬಂದಿದ್ರೂನೂವೆ "ನನ್ನ S. S. L. C. II Classನಲ್ಲೇನೇ ಪ್ಯಾಸ್ಮಾಡಿದ್ದು. . . 'ನಿನ್ಗಿಂತ ನಾನೇ ಘಟ್ಟಿಗ್ಳೂ'ಂತ ನನ್ಹೆಂಡ್ತಿ ಮುಂದಕ್ಕೆ ನನ್ನೇ ಹೀಯಾಳ್ಸೋ ಅವಸ್ಥೆಯಿಂದ ತಪ್ಪಿಸ್ಕೊಳ್ಳೋದು ನನ್ ಗಂಡಸ್ತನದ ಭಾರಾಂ"ತ, ಕಲ್ಯಾಣದ ವಿಷ್ಯದಲ್ಲೂ, ಖಯಾಲಿತನಾನ ಸಾಧಿಸ್ತಿಧಾನೆ, ನಂಕಪ್ಪೂ.

ಧೋಂಡೂ : ಮತ್ ಹೀಗವ್ರು ಮುಷ್ಕ್ರ ಹಿಡದ್ರೆ ವಿಮೋಚ್ನೆ ಹೇಗ್ಸಾಮಿ ? ನಾವಿಬ್ರೂ ಎಷ್ಟ್‌ಕಷ್ಟಾವ್ರಗ್ಲೀ . . . ಎಷ್ಟ್ ಖರ್ಚಾಗ್ಲೀ ಮಾಡ್ಸೇಬಿಡ್ಬೇಕೂಂತ ನಿಶ್ಚಯ್ಸಿರೋ ಆತ್ನ ಮದ್ವೇಗೆ ದಾರೀ ಹೇಗೆ ?

ರಂಗಣ್ಣ : ನನ್ನಿಂದ್‌ಮಟ್ಗೇನೇ ಆಗ್ದ ಕೆಲ್ಸಕ್ಕೆ ನಿನ್ನ್ ಸಹಾಯಾನೂ ಸೇರಿದ್ರೆ, ಫಲ್ಸೇ ಬಿಡುತ್ತೆ. ನಿನ್ನಾ ನನ್ನ ನಿಮಿತ್ತ . . . ಮೊದ್ಲು ಕೆಲ್ಸ. ಕಪ್ಪೂನ ಸಕ್ಲೇಶ್ಪುರಕ್ಕ್ ಸಾಗಿಸ್ಬಿಡೋದು. ಈಗೊಳ್ಳೇ ನೆಪ ಸಿಕ್ಕಿದೆ ; ನನ್ ಸೋದ್ರಮಾವ್ನ ಮಗನ್ಮದ್ವೆ. . . ಮನ್‌ತನ್ದ ಮುಖಂಡ್ರೆಲ್ಲಾ ಜಮಾಯಿಸ್ಲೇಬೇಕು. . . ನಮ್ಮನೇಯಿಂದ ನಾನ್ಮಟ್ಗೆ ಹೋಗ್‌ನಿಲ್ಲೋದು ಚೆನ್ನಾಗಿರೋದಿಲ್ಲ... ಕಪ್ಪೂನೂ ಹಾಜ್ರಾಗಿರ್ಬೇಕಾದ್ನ ಅವ್ನ ಮನಸ್ಗೆ ಮಂದಟ್ಮಾಡ್ಸೋದು ನಿನ್ಭಾರ.

ಧೋಂಡೂ : ಅಯ್ಯೋ ಮಹಾಸ್ವಾಮಿ, ನನ್ನಿಂದೇನಾದೀತು !

ರಂಗಣ್ಣ : ಮಾತ್ಹಾಡ್ಬೇಡ ಧೋಂಡು ! ಎಷ್ಟೂ ಖರ್ಚಾಗ್ಲೀ ನನಿಗೆ, ಇಲ್ಲಿಂದ್ ಹೊರಡ್ಸೇ ಬಿಡ್ಬೇಕು ಕಪ್ಪೂನ ! ಅವ್ನೀಗಿಲ್ಲೆಲ್ಲಾದ್ರೂ ಸಾಲ ಪಾಲ ಮಾಡಿರ್‍ತಾನೆ ! ಅದ್ನೆಲ್ಲಾ. . . ನಾನ್ಕೊಟ್ಟೋಗ್ತೇನೆ, ದುಡ್ನು ಅದ್ರಲ್ಲ್ ತೀರಿಸ್ಬಿಡು. ಬಾಕೀ ದುಡ್ನಲ್ಲಿ ಅವ್ನಿಗ್ಬೇಕಾದ ಸಾಮಾನ್ಸರಂಜಾಮು, ಬಟ್ಟೆ ಬರೆ ತರ್ಸ್ಕೊಟ್ಟು, ಕಾಲಿಂದ್ವೊದ್ರೋ, ಇಲ್ಲ ಕಾಲಿಗ್ಬಿದ್ದೋ ಕಳಿಸ್ಕೊಡೋದ್ ನಿನ್ಭಾರ . . . . (ಜೋಬಿನಲ್ಲಿ ಕೈಹಾಕುತ್ತಾ) ಸಾಲ, ಎಷ್ಟಿಧ್ಯೋ . . . ಅವ್ನಿಗೆ? . . .

ಧೋಂಡೂ : ಏನ್ ಜಾಸ್ತಿಯಾಗೇನಿಲ್ಲ ಸ್ವಾಮಿ. ಬಾಡ್ಗೆ ಬಾಬ್ತು, ಒಂದೆಪ್ಪತ್ತೈದ್ರೂಪಾಯಿ, ಚಿಲ್ರೆ ಹದಿನಾಲ್ಕಾಣೆ . . .

ರಂಗಣ್ಣ : (ಜೋಬಿನಲ್ಲಿ ಕೈಹಾಕಿಕೊಂಡು ಗೊಣಗುತ್ತಾ) ರೈಲ್ವೆಛಾರ್ಜು ಚಿಲ್ರೆ ನೂರ್ರೂಪಾಯಿ! ಕುದ್ರೆಗಾಡಿ ರೋಡ್ನಲ್ಲೇ ಬಂದ್ಬಿಡುತ್ತೆ. ಒಂದ್‌ಕುದ್ರೆ ಖುಲ್ತಿ... ಚಕ್ರಕ್‌ಚರ್ಬಿ... ಸಮಿಯತ್ಬೇಗ... ಲಾಳ, ಪಂದ್ಯದ್ಮುದ್ರೆ, ಗೊರ್ರು ನಾಜೋಕು . . . ರಸ್ತೆ ಅನ್ಯಾಯ. . . ಒಂದ್ ನೂರ್ರೂಪಾಯಿ! ಮೇಲ್ ಖರ್ಚೊಂದ್ಯೆವತ್ತು. ಜುಮ್ಲಾ ಇನ್ನೂರ್ರೈವತ್ತು ! ಹಾಗಾರ್ ನನ್ ಸಾವಿರ್ರೂಪಾಯಿನ್ನೋಟ್ನಲ್ಲಿ ಬಾಕಿ ಏಳ್ನೂರ್ರೈವತ್ತು ಇದ್ಮೇಲೆ, ಕಪ್ಪೂನ್ ಸಾಗ್ಸೋ ಖರ್ಚ್ಗೆ, ಸದ್ಯ ಕೊಡೋದ್ ಕಷ್ಟ... ಬಾಕೀ ಇದ್ರೆ, ಬೆಳಿಗ್ಗೆ wire ಮಾಡ್ಬೇಕಾಗುತ್ತೆ. (ಗಟ್ಟಿಯಾಗಿ)... ಎಷ್ಟೊಂತ ಹೇಳಿದ್ರಿ, ಬಾಡ್ಗೆಬಾಬ್ತು ?

ಧೋಂಡೂ : ಜಾಸ್ತಿ ಏನೂ ಇಲ್ಲ... ನೂರಹದ್ನೇಳ್ರೂಪಾಯಿ, ಹನ್ನೆರ್ಡಾಣೆ ಚಿಲ್ರೆ.

ರಂಗಣ್ಣ: (ಆ) ಹೂಂ ! ಹೂಂ ! ಚುಡಾಯ್ಸು ಚುಡಾಯ್ಸು (ಪ್ರ) ಅಂ ! ನೂರಕ್ಮೇಲೇ... ಇನ್ನೂರು ಅನ್ನಿ... ಚಿಲ್ರೆ ಏನೂ... ಇನ್ನಿದಲ್ದೆ ಏನಾದ್ರೂ ಸಾಲ? ...

ಧೋಂಡೂ : ಅಲ್ದೆ ಏನು ! ಅದೂ ಇದೂ, ಚಿಲ್ರೆ...

ರಂಗಣ್ಣ : ಸರಿ, ಇನ್ನೂರ್ರೈವತ್ತು ವಟ್ನಲ್ಲಿ. ಇಲ್ನೋಡು, ಧೋಂಡೂ, ನನ್ಹತ್ರ ಸದ್ಯ ಇರೋದು ಸಾವಿರ್ರೂಪಾಯಿ ನೋಟು ; ನಾನೂ, ಗಾಡಿ, ಕುದ್ರೆ, ಸಮಸ್ತೂವ್ವ ಊರಿಗ್ಹೋಗ್ಸೇರೋಕೆ, ಇನ್ನೂರ್ರೈವತ್ತಾದ್ರೂ ಬೇಕೇ ಬೇಕು ; ಬಾಕೀ ಏಳ್ನೂರ್ರೈವತ್ತು ನಿನ್ನತ್ರ ಕೊಟ್ಹೋಗ್ತೇನೆ (ಒಂದು leather purseನ್ನು ಹೊರಗೆ ತೆಗೆಯುತ್ತಾ) ಅದ್ರಲ್ಲವನ್ ಸಾಲಾನೂ ತೀರ್ಸಿ, ರೈಲ್ವೆ ಛಾರ್ಜು ವಗೈರೇಗೆ ಒಂದ್ನೂರು ರೂಪಾಯ್ನೂ ಕೈಲ್ಕೊಟ್ಟು, ಇನ್ನ್ ಮನೇಗ್ ಬಂದಾಗ್ಲೆಲ್ಲಾ ಬರೀ ಕೈಲಿ ಬರೋದಿಲ್ಲ ಅವ್ನು... ಅದೂ ಮದ್ವೆ ಮನೆ... ಖಯಾಲೀ ಆದ್ರೂ ಮನ್ತನದ ಗಂಭೀರ ಘಟ್ಟಿಸಿಧೆ. ಅವನ್ ಸ್ವಭಾವದಲ್ಲಿ... ಒಂದ್‌ಜೊತೆ ಧೋತ್ರ, ಒಂದ್ ಭಾರೀ ಸೀರೆ, ತಕ್ಕ ಕಣ, ಕೊಂಡ್ಕೊಟ್ ಕಳಿಸ್ಬಿಡವನ್ಕೈಲಿ ! ಬಾಕೀ ಏನು, ಮುನ್ನೂರು ಕೂಡ ಮಿಗಲಾರ್ದು ಅದ್ನಿಟ್ಕೊಂಡು, ನಾಳೆ ಬೆಳಗ್ಗೆ ನಾನ್ ಹೋಗುತ್ಲು wire ಮಾಡ್ತೇನಲ್ಲ, ಒಂದ್ಯೆನೂರುರೂಪಾಯಿ, ಸಾಕುಸದ್ಯ, ಅದ್ನೂವೇ ಸೇರಸ್ಕೊಂಡು, ನೀನು, ನಿನ್ನ್‌ಗೃಹಿಣೀನೂ, ಮಕ್ಳೂ, ಸಕ್ಲೇಶ್ಪುರಕ್ಕೆ ಬಂದ್ಸೇರಿ, ನಾವಿಬ್ರೂ

ಕೈಹಾಕಿರೋ ಕೆಲ್ಸಾನ ಸಾಂಗೋಪಾಂಗ್ವಾಗಿ ನೆರ್ವೇರಿಸ್ಕೊಡೋದೇ ಪರೀಕ್ಷೆ, ನಿನ್ನ ನನ್ನ ಸ್ನೇಹಕ್ಕೆ, ನನ್ನತ್ರಿರೋ ಸಾವಿರ್ರೂಪಾಯಿ, ವಂದೇ ನೋಟು. ಇನ್ನೂರೈವತ್ರೂಪಾಯಿ ಕೊಟ್ಬಿಟ್ಟು ನನಗೆ, ಬೇಗ ಕಳಿಸಿಬಿಡು. . . ಇನ್ನವನ್ ಬರೋವಾಗ ನಾನಿಲ್ಲಿದ್ರೋ, ಎದ್ಬಿಡ್ತಾನೆ. ನಮ್ಮಿಬ್ರ ಕಣ್ಣಿಗ್ ಕಾಣಿಸ್ದಾಹ್ಗೆ.

ಧೋಂಡೂ : ಇನ್ನೂರೈವತ್ರೂಪಾಯಿ ಎಲ್ಲಿಂದ್ ತರ್ಲಿ ಮಹಾಸ್ವಾಮಿ ! ? ಇನ್ನಿಷ್ಟೊತ್ತ್ಗೆ Post-Officeoo ಇಲ್ಲ, Bankooಇಲ್ಲ ! ನಿಮ್ಮ ಸಾವಿರ ರೂಪಾಯಿ ನೋಟ್ನ ಮುರ್ರೋಕೆ !

ರಂಗಣ್ಣ : ಹಾಗಾರ್ ನನ್ನೋಟಿಟ್ಕೊಂಡು ಬೆಳಿಗ್ಗೆ ಚಿಲ್ರೆ ಮಾಡಸ್ಕೋ. ಸದ್ಯ ಅದೇನ್ ದುಡ್ಡಿದ್ಯೋ, ಅದ್ನೆಲ್ಲಾ ಕೊಟ್ಬಿಡಿಲ್ಲಿ.

ಧೋಂಡೂ : ಬಾಡ್ಗೆ ಮೊಬಲಗು ಇತ್ಯಾದಿ ಒಂದೆಪ್ಪತ್ರೂಪಾಯಿ ಚಿಲ್ರೆ ಮೇಲಿಲ್ಲ ಮಹಾಸ್ವಾಮಿ, ನನ್ನಕೈಲಿ ಮನೇಲಿ. ಅಲ್ದೆ ನನ್ಹೆಂಡ್ತಿ ಹತ್ರ ಒಂದ್ ಮೂವತ್ರೂಪಾಯೋ, ಮುವ್ವತ್ತೈದ್ರೂಪಾಯೋ...

ರಂಗಣ್ಣ : ನೂರೈದ್ರೂಪಾಯಿ ! . . . ಸಾಲ್ದು ಧೋಂಡೂ ! ನಿನ್ನೂರ ರೂಪಾಯ್ಲಿ ನಾನ್ಹೋದ್ರೆ, ಸಾರೋಟು ಹಿಂದ್‌ಬಿದ್ಬಿಡುತ್ತೆ . . . ವರಪೂಜೆ, ಮೆರ್ವಣ್ಗೆ, ಎಲ್ಲಕ್ಕೂ car ಆಗೋದಿಲ್ಲ. ಸಾರೋಟೇ ಮನೆತನದ ಮಾಮೂಲು ! ಸಾರೋಟು ಕಳ್ಸಿದ್ರೋ, ನಾನ್ ಹಿಂದ್ಬೀಳ್ತೇನೆ. ಪರ್ವಾ ಇಲ್ಲ. ನನ್ನ ಜೊತೇಲಿ ಬಾ, Stationಗೆ ! ಚಿಲ್ರೆ ಮಾಡಿಸ್ಕೊಡ್ತೇನೆ ನೋಟ್ಗೆ! ಆಂ ! . . . ಬೇಡ, ಬೇಡ ! ನಮ್ಮಿಬ್ರಲ್ಲಿ ವಬ್ನೂವೆ ಕಪ್ಪು ಬಂದಾಗ ಇಲ್ಲಿ ಇಲ್ಲದಿದ್ರೆ ಆಸಾಮಿನೇ ಪರಾರಿ ಆದಾನು ! ಈಗ ಸಧ್ಯ ನಿನ್ನ ಹತ್ರ ಚಿಲ್ಲರೆ ಇದೆ, ನೂರೊ ನೂರೈದು ರೂಪಾಯೊ ! ಬೆಳಿಗ್ಗೆ ಹೋಗಿ ಸೇರತ್ಲೂನೂವೆ ಏಳ್ನೂರು ಐವತ್ತು ರೂಪಾಯಿಗೆ ಬದಲಾಗಿ ಸಾವ್ರಾನೇ wire ಮಾಡ್ಬಿಡ್ತೇನೆ. ! Post Officeನಿಂದಿಸ್ಕೋ ! ಏತನ್ಮಧ್ಯೆ ನಿನ್ನ ಚಿಲ್ರೆ ನೂರೈದು ರೂಪಾಯಿ ಕಪ್ಪೂಗೆ ಕೊಟ್ಟು ಅವನ್ನ ರವಾನಿಸಿ ಬಿಡು. ನೀನೂವೆ ಕೋಪಿಸ್ಕೋಬೇಡ . . . ಬರೀ ಕೈಲಿ ಬಂದ್ನೇರ್ಬೇಡ ! ನನ್ನ ಸಾವಿರರೂಪಾಯ್ನು Freeಯಾಗಿ . . . ಖರ್ಚುಮಾಡು ! ಏನೂ ಇಲ್ಲ, ವಧೂವರರಿಗೆ, ಅರ್ಸಿನ ಕುಂಕ್ಮ ಒಂದಿಷ್ಟು ಗಂಧ, ಒಂದು ಸೀರೆ, ಒಂದು ಜೊತೆ ಪಂಚೆ, ಒಂದು ಕಣ . . . ಯಥಾಶಕ್ತಿ . . . ಆದ್ರೊಂದುಮಟ್ಟಿಗೆ ಮರೀಬೇಡ ; ಕಪ್ಪೂನ

ಮಟ್ಟಿಗೆ, ನಾನ್ಹೇಳ್ದಾಗೆ, ಕಾಲಿಂದ್ಹೊದ್ರೋ, ಕಾಲಿಗ್ಬಿದ್ರೋ ರವಾನ್ಸೇಬಿಡ್ಬೇಕು, ರಾತ್ರೆ ರೈಲ್ನಲ್ಲಿ . . . ಇನ್ನು ನಾನ್ಹೋಗ್ತೇನೆ . . . ಇಲ್ಲಿದ್ದು ಅವನ ಕಣ್ಣಿಗಿಣ್ಣಿಗೆ ಬಿದ್ದೆನೋ, ಅಪಾಯ . . . . ಬರ್ತೇನೆ, ಧೋಂಡೂ !!

(ಧೋಂಡೂವಿನ ಎರಡುಕೈಗಳನ್ನು ಜೋಡಿಸಿ ಹಿಡಿದುಕೊಂಡು)

ಕಪ್ಪೂನ ಕಾಪಾಡಿ ಅವನದೊಂದು ಸಂಸಾರಾನ ಕುದರ್ಸಿ, "ಕುಟುಂಬ ಮುರ್ದ ಕುಬೇರ್ರೂ"ಂತ, ನೆರೆಹೊರ್ಯೋರು ಹೀಯಾಳ್ಸೋ, ನಮ್ಮ ಮನೆತನದವರ ಮಾನಾನ ಕಾಪಾಡೋದು ನಿನ್ನಭಾರ. ಇನ್ನೇನು ಹೇಳೇನೂ . . .

. . . ನಿನ್ನ ಹೃದಯಕ್ಕೇನು ಗೊತ್ತೊ . . . ನಿನ್ನ ಹೃದಯಕ್ಕೇನೇ ಗೊತ್ತೂ. ನಿನ್ನ ಗುರ್ತಾಗಿ ಒಂದು ಮುಕ್ಕಾಲುಗಂಟೆ ಕೂಡ ಇಲ್ಲ. ಆದ್ರೂನೂವೇ, ನಮ್ಮಿಬ್ಬರ್ನೂ ಸೇರ್ಸಿ ಆಮರಣಾಂತ ಸ್ನೇಹವನ್ನು ಕಲ್ಪಿಸಿದ. ಆ ಕಪಟ ನಾಟಕ ಸೂತ್ರಧಾರ್ನ ಮಹಿಮೇನ ಎಷ್ಟು ಹೊಗ್ಳಿದ್ರೂ ಸಾಲ್ದು. ಬರ್ತೇನೆ. ಧೋಂಡೂ . . . ನಿನ್ರೈಲು, ಹನ್ನೊಂದುಘಂಟೇಗೆ ನಾಳೆ, ಮರೀಬೇಡ.

. . . Whole compartmentಏ engage ಮಾಡ್ಕೋ . . . ಖರ್ಚು ಮಾಡೋಕ್ ಹಿಂಜರೀಬೇಡ . . . wireoo ಹತ್ಘಂಟೇಹೊತ್ಗೆ ಬಂದು ಸೇರ್ಬಿಟ್ಟಿರುತ್ತೆ . . . Expressoo ! ordinary ಅಲ್ಲಾ. ಬರ್ತೇನೆ . . . ಮುಖ್ಯ ಕಪ್ಪೂವಿನ ಸುಖ. . . ನಮ್ಮಿಬ್ರ ಸೌಖ್ಯ !

(ಚಿನ್ನದ ಎರಡು ಗಡಿಯಾರಗಳನ್ನೂ ಮತ್ತೆ ತೆಗೆದುನೋಡುತ್ತಾ)

ಓಹೋ !! . . . ಓಹೋ . . ಓಹೋ !!!. . .

[ಎಂದುಕೊಂಡು ನಿಷ್ಕ್ರಮಣ]

ಧೋಂಡೂ : (ಆತ್ಮಗತಂ) ಇದೇನಾಶ್ಚರ್ಯ ! ಇಹ್ಲೋಕ್ದಲ್ಲಿ . . ಆ ಕೋಟು. . . ಕರೀಬನಾತು . . . ಗಜ ಹದಿನೈದು ರೂಪಾಯೋ !? ಗಜ್ದ ಬೆಲೆ ಭಗವಂತನೇ ಬಲ್ಲ. . . ನಾಲಕ್ಕು ಬೆರಳಂಚಿನ ಜರ್ತಾರಿ. . . ರುಮಾಲ್ಗೆ . . . ಇನ್ನು ಜೋಬಿನಲ್ಲೊಂದು ಗಡಿಯಾರ . . . ಸರಪ್ಣಿ ಸರಾಸರಿ ಎಂಟು ಸವರನ್ನಾದರೂ ಆಗಿರ್ಬೇಕು. . . ಅಲ್ದೆ. . . ಕೈಗೊಂದ್ ಗಡಿಯಾರ . . . ಇನ್ನಲ್ದೆ ಆತ್ನ ಧೋತ್ರ. . . ಆತನ ಗಂಭೀರ . . . ಆತನಧ್ವನಿ . . . ಇಷ್ಟೂನೂ ಇಲ್ದೆ ಈ ಪ್ರಾಣಿ ಬಂದಿಧೆ ! ವಂದ್ವರ್ಷದಿಂದ ಬಾಡ್ಗೇನೂ ಕೊಡ್ದೆ. ಆರು ತಿಂಗಳಿಂದ, ಅರ್ಧಹೊಟ್ಟೇಗೆ ತಿಂತಾ ಬದಕ್ತಾ ಇರೋ ಕಪ್ಪಣ್ಣೋರೂಂತ್ಲೇ ತಿಳಕೊಳ್ತಿದ್ದೆ. ಈತನ ಮೂಗ್ನೂ . . . ಕಣ್ಣೂ ನೋಡಿದರೆ !! . . .ಆದ್ರೇನು ? . . . ಅಶ್ವಿನೀಕುಮಾರ್ರಿರ್ಲಿಲ್ವೇ !. . . ನಕುಲ ಸಹದೇವರಿರಲಿಲ್ಲವೆ ! . . . ಲವಕುಶರಿರಲಿಲ್ಲವೆ ! . . . ಇದ್ರು

. . . ಆದ್ರೂ, ಅವ್ರೆಲ್ರೂ ತಕ್ಕಮಟ್ಟಿಗೆ, ವಂದೇ ಸ್ವಭಾವ. ಇವ್ರಿಬ್ರಲ್ಲೋ ರಂಥೋಲ್ ರಂಗಣ್ಣೋರೆಲ್ಲಿ ? ಖಯಾಲಿ ಕಪ್ಪಣ್ಣೋರೆಲ್ಲಿ ? . . . ಇವರ್ಗೋತ್ರ ಕುಲ. . . ಮನ್ತನ. . . ಇವ್ರುಗಳ ಗೌರ್‍ವ ಮರ್‍ಯಾದೆ, ಇವ್ರುಗಳ ದುಡ್ಡು ದುಗ್ಗಾಣಿ, ಕಾಸು, ಖರ್ಚು, ವೆಚ್ಚ ಇವುಗಳ್ನೆಲ್ಲಾ ಹಿಂದಿಟ್ಟು, ಕಪ್ಪೂನ್ ಕಾಪಾಡ್ಬೇಕೂಂತ, ಸಕ್ಲೇಶ್ಪುರ್‍ದಿಂದಿಲ್ಗೆ. . . ಇಲ್ಲಿಂದ್ ಸಕ್ಲೇಶ್ಪುರಕ್ಕೆ ಹಾರಾಡ್ತಿರೋ ಅಗ್ರಜನ್ನೂ... ಆ...

(ಹಗ್ಗದಿಂದ ಕಟ್ಟಿರುವ ಸಂದೂಕವನ್ನು ಸೂಚಿಸುತ್ತಾ)

ಸರ್ವಸ್ವಾನೂ ಬಿಟ್ಟು ಒದ್ದಾಡ್ತಿರೋ ಈ ಅನುಜನ್ನೂ ಗಮನಿಸ್ದ್ರೆ. . . ಅಣ್ತಮ್ಮಂದ್ರಾದ್ರೇನು, ಅಕ್ಕತಂಗೀರಾದ್ರೇನು ಬಾಡ್ಗೆ ಕೇಳೋನು, ಬಾಡ್ಗೆ ಕೊಡೋನು ಆದ್ರೇನೂ . . . ಇದೆಲ್ಲಾ ಮಾಯೆ ! ಸಂಸ್ಕಾರ ವಾಸನೆ, ಪುರಾಕೃತ ಬಾಂಧವ್ಯ, ಕರ್ಮಾಂತರ ಪರೀಕ್ಷೆ ! ... ಆದ್ರೂನೂವೆ, ಈ ಮಹತ್ಪ್ರಾಣೀ ಯೋಗ್ತೇಗೆ ತಕ್ಕ ಸ್ವಾಗ್ತಾನ ಅರ್ಪ್ಸೋ ಯೋಗ್ಯೇ ನನಗಿಲ್ದಿದ್ರೂನೂವೆ, ಒಂದ್ ವರ್ಷ್ದ ಅಜ್ಞಾತ ವಾಸಾನ ನನ್ಗೃಹದ್ದಲ್ಲಿ ತೀರಿಸ್ದ ಈ ಜಗದುತ್ಕೃಷ್ಟ ಜಂತು, ತಿರಿಗೀ ಕೋಣೇಗೆ ಈಗ್ಲೋ ಆಗ್ಲೋ ಬರೋವಾಗ . . . ತಿಲದಷ್ಟು ಕಾಷ್ಟ ಧೂಳೀನೂ ಬಿಡ್ದೆ ಮತ್ತೆ ತಂಗ್ದಾಳ್ಗೆ ತೆಗೆದು ಹಾಕೋದ್ ನನ್ಭಾರ . . . ಖಯಾಲೀನೋ ಕಪ್ಪಣ್ಣೋರು !?... ...ಅದೇನ್ ಹಣೇಬರ್ಹವೋ ಕಾಣೆ! ನಮ್ಹಾಗಿಲ್ದೆ ಇರೋರು ಹುಚ್ರೂಂತ ನಮಗ್ತೋಚತ್ತಲ್ಲಾ, ಹಾಗ್ಯೇ ಆ ಹುಚ್ಚರ್‌ಕಣ್ಗೆ ನಾವು ಹುಚ್ರೂಂತ ತೋಚಬಹ್ದೂಂಬೋದು ಹೊಳ್ಯೋದಿಲ್ಲ ನಂಮಿದಳ್ಗೆ . . . ಮಹಾತ್ಮಾ ಗಾಂಧೀ ಇಲ್ವೇ . . . ಅಪ್ಪ ದಿವಾನ . . . ತಾತ ದಿವಾನ . . . ತಾನು ಬ್ಯಾರಿಸ್ಟ್ರು . . . ಇದ್ದೆಲ್ಲಾ ಬಿಟ್ಬಿಟ್ಟು "ಭಾರತ್ಮಾತೆ ಹೆತ್ತಮ್ಮನ್‌ಗಿಂತ ಹೆಚ್ಚು, ದೇಶದ್‌ಸುಖ ನನ್ಸುಖಕ್ಕಿಂತ ದೊಡ್ದೂ"ಂತ್ಹಟಹಿಡ್ದು ಲಾರ್ಡ್ ಗಾಂಧೀಂತಾಗ್ಬಹುದಾಗಿದ್ದ ಪದ್ವೀನ ವದ್ರಿ, ಹಸ್ದೋರ ಮಾಂಸ್‌ರಕ್ತಕ್ಕೆ ಮೇವು ತೋರಿಸ್ತಿದ್ರೂ, ತಾನ್ಮಟ್ಟಿಗೆ ಯಮಕೆ (M. K) ಗಾಂಧಿಯಾಗಿರೋದ್ರಲ್ಲಿ ತೃಪ್ತಿಕಾಣೋ, ಆತ್ನಿಗಿಲ್ಲದ್ ಖಯಾಲಿತನ, ನಂ ಕಪ್ಪಣ್ಣೋರ್ಗೆಲ್ಲಿಂದ ಬಂತೂ ?–ಈ ಕೋಣೇನ್ನಾದ್ರೂ ಚೊಕ್ಕಟ್ವಾಗ್ಯೇ ಗುಡ್ಸಿ ಇಡಿಸಿದ ಮೇಲೆ, ಮುಂದಕ್ಕೆ ರಂಗಣ್ಣೋರು ನನ್ಗೆ ವಾಗ್ದಾನ ಮಾಡ್ದ ಐಶ್ವರ್ಯಾನ ಅನುಭವ್ಸೋ ಅರ್ಹ್ತೆ ಎಲ್ಬಂದೀತೂ ? . . . ಮುಖ್ಯ, ರಕ್ತಾ ರಕ್ತಾನೇ . . . ಅದ್ರಲ್ಲೂ ದೊಡ್ರಕ್ತಾ ದೊಡ್ರಕ್ತಾನೇ . . . ಚಿಕ್ರಕ್ತಾ, ಅಲ್ಲ ತಿಳೀರಕ್ತಾ. . . ತಿಳ್ನೀರೇ . . .!

(ಮೂಲೆಯಲ್ಲಿರುವ ಕಸಪರಿಕೆಯಂದ ಕೋಣೆಯನ್ನು ಗುಡಿಸುತ್ತಾ)

. . . ಆದ್ರೂ, ಮನೆ, ಬಾಕ್ಲು . . . ಮೃಷ್ಟಾನ್ನ ಭೋಜ್ನ . . . ಅದೆಂಥಾದ್ದು . . . ಹಂಸಾನ್ ತೂಗೋತಲ್ಪದಂಥಾ ಹಾಸ್ಗೆ, ಇವುಗಳನ್ನೆಲ್ಲಾ ಬಿಟ್ಬಿಟ್ಟು, ಹೀಗ್ ಹೊಟ್ಟೇಗಿಲ್ದೆ ಹಾರಾಡ್ತಾ ಹರ್ಕಲ್ ಚಾಪೆ ಮೇಲೆ ಹೊರಳ್ತಿರೋ ಕಪ್ಪಣ್ಣೋರ್‍ನ ಕನಿಕರ್‍ಸೋದ್ ಹ್ಯಾಗೆ ? . . . ರಾಜ್ಯಾನ್‌ಬಿಟ್ಟ ರಾಮನ್ನೂ

ಧೃವನ್ನೂ, . . ಇಲ್ಲ, ಪ್ರಭುತ್ವಾನ್ ಬಿಟ್ಟ ಪ್ರತ್ಯೊಬ್ಬ ರಾಜನ್ನೂ ಗೆಡ್ಡೆ ಗೆಣ್ಸು, ತಿಂದ್ಕೊಂಡು ಗೊಂಡಾರಣ್ಯದಲ್ಲಿ ಕಾಲಾನ್ ಕಳ್ಯೋದು ಪುರಾಣದಲ್ಲೀಂತ್ ತಿಳ್ಕೊಂಡಿದ್ದೆ. . . ಆದ್ರೆ ತ್ರೇತೆಯಿಂದ್ ಈಚ್ಗೆ ತಹಲ್ವರ್ಗೂ . . . ಆತ್ನ್ವೀಳ್ವಾದ್ಗೆ, ಅಪ್ಪ ಅಣ್ಣಿಂದ್‌ಬಂದ ಅಮರತ್ವಕ್ಕಿಂತ್ಲೂ, ಸ್ವಾತಂತ್ರ್ಯಾನ್ ಕೊಡೋ ಸನ್ಯಾಸಾನೇ ಮೇಲೂಂತಂದ್ನಲ್ಲಾ ಈತ . . . ಈತ್ನಾದ್ಗೆ . . . ಇಧಾರೆ ! ಈ ಕಲ್ಯುಗ್ದಲ್ಲೂ. . . ಇಧಾರೆ !!. . . ಮಳೆ ಎಲ್ಲೀದು ? . . . ಬೆಳೆ ಎಲ್ಲೀದು ? . . . ಸೂರ್ಯ ಚಂದ್ರರು ಯಾತಕ್ಕ್ ಸುತ್ತಿದ್ರು?. . . . ನನ್ನಂಥಾ ಅಲ್ಪರ್ರುತುಂಬಿದ ಅಧ್ವಾನ ಪ್ರಪಂಚ್ದ ಸುತ್ಲೂ . .

(ಕಸಪರಕೆಯನ್ನು ಕೈಕೊಂಡು ಪ್ರಯೋಗಿಸುತ್ತಾ)

ಈತ್ನೇನ್ ತಿಳ್ಕೊಂಡಾನು ? . . ಈತ್ನಿಂದ್ ಬರ್ಬೇಕಾದ್ ಬಾಡ್ಗೇಗೆ ಬಾಯ್ಬಿಡ್ತಾ ಬೊಗಳ್ತಿರೋ ಭಿಕಾರೀಂತಿಳ್ಕೊಂಡಾನೇ ಹೊರ್ತು, ನನ್ನ, ಈತ್ನ ರಕ್ತ, ಈತ್ನ ಯೋಗ್ತೆ ತಿಳ್ದು ಈಗ್ಲಾದ್ರೂ ಯತ್ಸೌಕರ್ಯ, ಯತ್‌ನನ್ನಶಕ್ತಿ. . . ಯತ್‌ನನ್ನನ್ಕೂಲ . . . ಯತ್ ನನ್ಗೀಗಿರೊ ಸ್ಥಿತಿ, ತತ್‌ವರಿಗೂ . . . ಈತ್ನ ಶಮ, ಕ್ಷಮಾದಿ ಗುಣಾದಿಗಳ್ನ ಗಣಿಸ್ತಾ, ಈತ್ನಲಂಕರಿಸ್ತಿದ್ದ ಕೋಣೇನ ಕಸ್ವಿಲ್ದೆ ಗುಡ್ಸಿ, ಮಾಡೋದಾದ್ರೂ ನನಗ್ ಲಭ್ಯ !!

(ಕೋಣೆಯನ್ನು ಚೊಕ್ಕಟವಾಗಿ ಗುಡಿಸುತ್ತಾ)

ಆದ್ರೂ ವಟ್ನಲ್ಲ್ ತೋಚುತ್ತೆ. . . . ಇಧಾರೆ . .. ಇಹ್ಲೋಕಾನ್ದ್ವೇಸ್ತಾ . . . ಪರ್ಲೋಕಾನ್ ಬಯಸ್ತಾ . . . ಇಧಾರೆ . . . . ನನ್ನಂಥಾ ಪಾಮರ್ರ್ರನ್ನಾ. . . ಪರಿತ್ರಯ್ಸೋಕೇ . . . ಇಧಾರೆ . . . ಪರ್ಮಾತ್ಮನ್ ದೂತ್ರೂ, ಇಧಾರೆ !

(ಸಂದೂಕದ ಕಡೆ ನೋಡಿ)

ಮೊದ್ಲು ಬಂಡವಾಳ ಹೋಗೋ ಹೆದ್ರಿಕೇಲಿ ಬಿಗ್ದು, ಕಟ್ದ ಈ ಹಗ್ಗಾನ ಹೊರಗೆ ಹಾಕ್ಬೇಕು.

(ಎಂದು ಹಗ್ಗವನ್ನು ಬಿಚ್ಚಿ ಹೊರಗೆ ಹಾಕುವನು)

. . . ಸಕ್ಲೇಶ್ಪುರಾಂತಂದ್ನಲ್ಲಾ ಆತ. . . ಹವಾ ಹ್ಯಾಗಿದ್ಯೋ ಅತ್ಕಡೆ . . . ಮಲ್ನಾಡೋ ಏನೋ . . . ಮೈಗೊಂಟಿಸ್ಕೊಳ್ಳೇ ಬೇಕು . . . ಬ್ರಾಹಣ್ನಿಗೇನು . . . ಹೊಟ್ಟೇ ತುಂಬೋದ್ ಹೋಂ ರೂಲು ಬಾಯಿಗೆ ಸಿಕ್ಕಿದ್ಕಡೆ ಭರತ್ತಾತೆ . . .

[ಗುಡಿಸಲುಪಕ್ರಮಿಸುವನು]

ಕಪ್ಪಣ್ಣ : (from behind the scenes)

ರುಣಾಂಬೋದ್ನ ನೀಗಸ್ಲೇ ಬೇಕು, ನರ; ನರವಿರೋ ನರ . . . ಅದ್ರಲ್ಲೂ ಧನ್ರುಣ ಅಂಟ್ಕೊಂಡಿರೋವಾಗ . . . ಈ ಧಾರುಣೀನ್ಬಿಟ್ಟು. . . . ದೇವಲೋಕಾನ್ಯೆದಿ ಪರಮಾತ್ಮನ್ನ ಪ್ರೇಕ್ಷ್ಸೋದೂಂದ್ರೇನು... ಆತ್ನಲ್ಲಿ ಐಕ್ಯಹೊಂದೋದೂಂದ್ರೇನು... ಅಸಾಧ್ಯಕನ್ಸೂ!! ಬ್ರಾಹ್ಮಣ್ನಾಗ್ ಹುಟ್ಟಿ, ಪ್ರಾಣಿ, ಬ್ರಹ್ಮವೃತ್ತೀನ್ಬಿಟ್ಟು, ಬಡ ಬ್ರಾಹ್ಮಣ್ರಿಂದ ಬಾಡ್ಗೆ ಬಿಚ್ಸಿ, ಆಹಾರ ನಿದ್ರಾದಿಗಳ್ನ ಅನುಕರಿಸ್ತಿರೋ ಬ್ರಹ್ಮಹಿಂಸಿ... ರವರವಾದಿ ನರಕದಲ್ಲಿ front seatಗೆ booked ಆಗಿರೋ ಈ ಧೋಂಡೂರಾಯ್ನಿಗೆ ರೂಪಾಯಿ ಬಾಬತ್ನಲ್ಲಿ ರುಣಿಯಾಗಿರೋ ನಾನು . . . ಅದ್ನ ಬಿಡಿಸ್ಕೊಳ್ಳೋಕೆ, ರೈಲೆ sleeper ತಿರ್ವ್ಹಾಕೋ ಕೆಲ್ಸಕ್ಕೊಪ್ಕೊಂಡಿರೋದು ನಮ್ಮ ಅಣ್ಣಂಗ್ ತಿಳ್ದು... ನಮ್ಮಣ್ಣಂಗೇನೂ ... ಸಕ್ಲೇಶ್ಪುರ್ದ ಸರಹದ್ನ ತೆಂಗಿನ್ಮರಗ್ಳೆಲ್ಲಾ "ಹಯ್ಯೋ, ಚಿಕ್ಕೆಜ್ಮಾನ್ರು ಚಾಕ್ರೀಗಿಳಿದ್ಮೇಲೆ, ನಾವು ನೆಟ್ಟಗೆ ನಟ್ಕೊಂಡಿರೋದ್ ನ್ಯಾಯ್ವೇ"ಂತ ನೆಲ್ಸಮಕ್ ಬಿದ್ದು ಕಾಯ್ಗ್ಳೂಂಬೋ ಹಣೆಗಳ್ನ ಬಡಕೊಂಡು, ನೆಲಕ್ವಚ್ಕೊಳ್ತಾ . . . . ಕಾಯ್ಕಾಯ್ಗಿರೋ ತ್ರಿಣೇತ್ರಗಳಿಂದ್ಲೂ ಎಳೆವಾರಿ ಧಾರೆ ಸುರಸ್ತಾ, ನಮ್ಮಣ್ಣ annual ಕೋಕನಟ್ ಫಸ್ಲಿಗೆ ತುಂಡ್ಹಾಕೋ risk ಇದ್ರೂನೂವೇ, ದಿನದೊಂದೊಂದ್ರೂಪಾಯಿ ಕೂಲೀನಲ್ಲಿ, ಜಲ್ಪಾನಕ್ಕೂ, ವಂದ್ಕಾಸ್ನೂ ಮುಟ್ದೆ, ಅನುದಿನಮೊಂದೊಂದಾಗಿ ಜಮಾಯ್ಸಿ, ಮೂವ್ವತ್ತೆರಡ್ಲರವತ್ತ್ ದಿನ್ದಲ್ಲಿ, ಬಾಡ್ಗೇನ್ ತೀರ್ಸಿ, ಎರ್ಡು ತಿಂಗ್ಳು ಅನ್ನನೀರು ಇಲ್ದೆ ನಾನು . . . ಗಾಂಧೀಗಾದ್ರೋ ವೀಚಿವಾಟ್ರು. . . ಅದೂ ಕೂಡ ಸೇವೆನೆಯೆ ಇಲ್ಲ್ದೆ ನಾನು ಸಾಯೋ ಪಾಪಾನ, ಆತ್ಮಹತ್ಯಾಂತ ನನ್ತಲೇಗೇ ಏರಸ್ತಾನೋ. . . ಇಲ್ಲ, ಬ್ರಹ್ಮಹತ್ಯಾಂತ ತೀರ್ಮಾನ್ಸಿ, ಧೋಂಡೂರಾಯನ್ ಗಂಟ್ಗಿಗೆ ಕಾಸಿಟ್ಟಿರ್ತಾನೋ, ಹಂಡೇಹಂಡ್ಯಾಗಿ ಕರ್ಗಿಸಿದ ಸೀಸಾನ, . . . ಅದ್ನ ನಾವಿಬ್ರೂನೂವೆ, ಈ ದೇಹ್ಗಳ್ನ ವದ್ರಿ . . . ಇಹ್ಲೋಕಾನ್ಬಿಟ್ಟು ಯಮನೆದ್ರೂಗೆ ನಿಂತಿರೋವಾಗ್ಯೇ ಹೊರ್ತು... ಈಗಲ್ಲ... ಇತ್ಯರ್ಥವಾಗೋದು... ಈಗಲ್ಲ! ಮುಖ್ಯಬ್ರಾಹ್ಮಣ ಜನ್ಮ–ಕಲಿಯುಗದಲ್ಲಿ brute ಜನ್ಮ ! ಸರಿ, ಈ ಮೃಗಕ್ಕೇನಾದ್ರೂ ಹೃದಯಾಂಬೋದು ಇಥೆಯ ಇಲ್ವೆ ಅಂಬೋದ್ನ ಇತ್ಯರ್ಥ ಮಾಡಿಕೊಂಡು...

(ಎನ್ನುತ್ತಾ ಹೊಸಲನ್ನು ದಾಟುವನು)

[ಇದನ್ನು ಕೇಳಿ ನಡುಗುತ್ತಾ ಧೋಂಡುವು ಕೋಣೆಯ ಮೂಲೆಯಲ್ಲಿ ದೊಡ್ಡದೊಂದು ಹಂಡೆಯ ಮರೆಯನ್ನು ಹೊಗುವನು]

ಕಪ್ಪಣ್ಣ: (ಪ್ರವೇಶಿಸಿ) ಇದೇನಿದು ? ... ಈಗ್ತಾನೆ ಯಮಲೋಕ, ಯಮ, ಹಂಡೆಗ್ಳು... ಕಾಸಿದ್ರೀಸ. . . . ಧೋಂಡೂ ರಾಯ್ನ ಬಾಯಿ . . . ಅಂತಿದ್ದದ್ದೇನು?. . . ಈ ಪಾರ್ವ, ಪಾತ್ಕಿ ನನ್ನ ಬಲೀಗೆಂತ ಬಚ್ಚಿಟ್ಕೊಂಡಿದ್ದೀ ಬೋನ್ನಲ್ಲೇ... ತಾನ್ ಮುಂದಕ್ಕ್ ಕುಡ್ಯೋ ಕಾಸಿದ್ರೀಸಾನ್ ಕಾಯ್ಸೋಕೆ ಬೇಕಾದ್ ಹಂಡೆಗ್ಳ ಸಪ್ಲೈಯಿ ತಾನೇ contract ತಗೊಂಡು ಹಂಡೇಬಾಡ್ಗೆ ಕೊಡ್ಲಾರ್ದ ಯಮನ್ನೂ ನನ್ವಾಡ್ಗೇ ತರೋಕೇಂತ್ಲೇ... ತುಂಬ್ಸಿರೋದು... ಹೀಗೆ !??

ಧೋಂಡೂ : (ಪರಕೆಯನ್ನು ಬಿಟ್ಟು) ಕ್ಷಮ್ಸಿ, ಸ್ವಾಮಿ.

ಕಪ್ಪಣ್ಣ : "ಸ್ವಾಮಿ !" ಇದೇನ್ಹುಚ್ಚು ಧೋಂಡೂರಾಯ್ರೆ ? . . . ಪರ್ಕೆ ತೊಕ್ಕೊಂಡು ಮುಸ್ರೆತಿಕ್ಕೊ ದೇವೇರಿ ಹಾಗೆ ಗುಡಸ್ತಿರೋ ಹುಚ್ಚಲ್ಲ ನಾನ್ಹೇಳಿದ್ದು . . . ಬಿಡ್ಗಾಸ್ ಬಾಳ್ದ ಬಂಧುಗ್ಳು ಬಿಟ್ಟೀ ಗ್ರಾಸವಾಸಾನ ತಿರ್‍ಕೊಂಡ್ ತಿನ್ನೋವ್ರು, ಹೀಗೆಲ್ಲಾ ಆಪಾದಮಸ್ತಕ ಅಷ್ಟೋತ್ತ್ರಾಭಿಷೇಕ ನನ್ಗೆ ಮಾಡ್ದ ನಿಮ್ಮ ತಿಳ್ವಾಳ್ಗೆಯಿಂದ ನನ್ನ "ಸ್ವಾಮೀ"ಂದ್ರಲ್ಲಾ, ಆ ಹುಚ್ಚೇ ನಾನ್ಕೇಳಿದ್ದು ನೋಡೀ...

ಧೋಂಡೂ : ಒಪ್ದೆ ಸ್ವಾಮಿ, ಸ್ವಾಮಿ ಏನು ಮಹಾಸ್ವಾಮಿ... ನನ್ನ ಹಿಂದಾಳದಿದ್ರು, ಈಗಾಳೊ ಅಲ್ದೆ ಮುಂದಾಳೊ ಮಹಾಸ್ವಾಮಿ, ಒಪ್ದೆ... ತಮ್ಮ ಚಿನ್ನದ ಕಿವೀನ ! ನನ್ನ ಬೆಳ್ಳಿ ಅಲ್ಲ... ಕಂಚು, ಹಿತ್ತಾಳೆ, ಕಬ್ಬಿಣ, ಸೀಸ ಬೇಡಬೇಡ ! ಮಾಂಸದ್ ನಾಲಿಗೆಯಿಂದ ತಿಳಿಯ್ದ ಮಂಕು... ಅಲ್ಲ... ಜ್ಞಾನವಿಲ್ದ ಅಜ್ಞಾನಿ, ಬೊಗ್ಳಿದಬೊಗಳ್ನ ಮರ್‍ಯೋದ್ ನಿಂಭಾರ... ಅದ್ನ ಬಗ್ಳೂಂತಿಳ್ಯೋದ್ ನನ್ಭಾರ... ಕ್ಷಮ್ಸಿ.. . . ತಮ್ಮಣ್ಣಾವ್ರು ಬಂದಿದ್ರು . . . ಅಲ್ಲಾ . . . ಬಿಜಯ ಮಾಡಿದ್ರು ... ರಂಗಣ್ಣ... ರಂಢೋಲ್ ರಂಗಣ್ಣೋರು . . . ಸಕಲೇಶ್ಪುರದ ಸಕಲೈಶ್ವರ್ಯಪುರದ ಪ್ರಭು. . . ರಂಡೋಲ್ ರಂಗಣ್ಣೋರು . . . ಅದೇನ್ ಪುರಾಕೃತಪಾಪ್ವೋ. . . ಕರ್ಮವೋ . . . ಅದನ್ನ್ ತೀರ್ಸ್‌ಕೊಳ್ಳೋಕೆ ಈ (ಎದೆಯನ್ನು ಬಡಿದುಕೊಳ್ಳುತ್ತಾ) ಕಡುಪಾಪಿಯ ಮನೇಗೆ . . . ಅಲ್ಲಾ, ತಾವು ಅಭಿಧಾನಿಸ್ದ್ದಾಗೆ . . . ಈ ಗೊಗ್ಗೈಯ್ಯ್ನ ಗುಹೇಗೆ, ತಾವಿಲ್ದಾಗ ಬಿಜ್ಯಾ ಮಾಡಿದ್ರು (ಕವಿತ ಕಂಚಿನ ಬಾನೆಯನ್ನು ಸೂಚಿಸುತ್ತಾ) ಇದೇ ಆತ್ನಲಂಕರ್ಸಿದ ಸುಖಾನ ಅನ್ಭವಿಸ್ತಿರೋ ವಸ್ತು, ಪಾತ್ರೆ !!

ಕಪ್ಪಣ್ಣ : (ತಾತ್ಸಾರಸ್ಮಿತನಾಗಿ) ಉಹುಃ ! "ಈ ಭಿಕಾರೀಗೆ ಅಣ್ಣನಂತೆ ! ಕೋಟೀಶ್ವರನಂತೆ ! . . . ರಂಗಣ್ಣನಂತೆ !. . . ಇನ್ ರಂಡೋಲ್ ರಂಗಣ್ಣನಂತೆ !!. . . ಕೂಲೀನಾಲೀ ಮಾಡೂ !" ಹಯ್ಯೋ! ಇದೂ ವಂದ್ ಪ್ರಪಂಚ್ವೆ ? . . . ಸ್ಥಿರವಲ್ಲಾ, ಸ್ಥಿರವಲ್ಲಾ ! ಬರೀ ಮಾಯೆ. ಧೋಂಡೂರಾಯ್ರೆ, ಪರೋಕ್ಷಾನ ಹುಡುಕುತ್ತಿರೋ ನನ್ಗೆ ತಾವು ಆಗ್ಗೇಳ್ದಾಗ್ಗೆ ಭಿಕಾರೀಂತ್ ಬಯ್ಯೊದೂ ಆಗ ! ಈಗ ಸ್ವಾಮೀಂತ ಸ್ವಾಗತಾನ್ನೀಡೋದು !! ಇದು ಮಾಯಾ ಪ್ರಪಂಚ . . . ಇಹದ ಐಕೀಯ ಭಾವದ ತಿರುಳು ತಿಳ್ದು ಪರಮಾತ್ಮನ ಲೀಲಾ ಹಾಸ್ಯವನ್ನು ಅರಿತು ಅನಂತಾನಂದವು ತುಂಬಿ ತುಳುಕುವ . . . ತುಂಬಿತುಳ್ಕುವ ನನ್ನ ಮನಸ್ಸಿಗೆ. . . ನಮ್ಮಣ್ಣ ರಂಗು . . . ನನ್ನ ತಮ್ಮ ಧೋಂಡೂ . . . ನಾನೂವೂನೂವೇ ಒಂದೇನೇವೆಯೇ ಆದ್ರೂ, ಅದನ್ನ್ ಅರ್ಯದ್ನೀನು ಸಕ್ಲೈಶ್ವರ್ಯಪುರದ ನಮ್ಮಣ್ಣ ಇಲ್ಬಂದಾಂತ ನನ್ಪರಿಹಾಸ ಮಾಡೋ ಚಿತ್ರಹಂಸೆಗೆ, ನನ್ನ ಗುರಿಮಾಡೋದು ಉಚಿತ್ವಲ್ಲ! ಧೋಂಡೂ . . . ಮಕ್ಕುಮರೀ ಇರೋ ನಿನಗೆ ಉಚಿತ್ವಲ್ಲ ! ಹೀಗ್ ಸುಳ್ಳೇಳಿ ಸಾಧುಗಳ್ನ ಸತಾಯ್ಸೋದು ತರವಲ್ಲ. . . ನರಪ್ರಾಣಿಗಳ್ಗೆ ನ್ಯಾಯವಲ್ಲ, ನೀತಿಯಲ್ಲ. . . . ಸತ್ತು ಮುಂದೆ ಸೇರೊ ಸ್ವರ್ಗಕ್ಕೆ ಗತಿಯಲ್ಲ. . . ನರಕಾನ ತಪ್ಪಿಸಿಕೊಳ್ಳೊ ದಾರಿ. ಇದಲ್ಲ.

ಧೋಂಡೂ : (ವಿಷಾದವನ್ನು ಪ್ರಕಟಿಸಿ, ತಲೆಯನ್ನು ಕೆದರಿಕೊಳ್ಳುತ್ತಾ ಮಸ್ತಕ ವಕ್ಷಸ್ಥಳಗಳನ್ನು ಬಡಿದುಕೊಳ್ಳುತ್ತಾ) ನಂಬಿ ಸ್ವಾಮಿ, ನಂಬಿ !! ನಿಮ್ಮಣ್ಣೋರು . . . ಬಂದಿದ್ರು . . . ನಿಜ್ವಾಗ್ ಬಂದಿದ್ರು!

ಕಪ್ಪಣ್ಣ : ಬಂದಿರಬಹುದು, ಧೋಂಡೂರಾಯ್ರೇ, ಯಾರೋ ಒಬ್ಬ ಪ್ರಾಣೀ . . . . ಹೇಳ್ಕೊಂಡ್ ಇರೋದು ನಮ್ಮಣ್ಣಾಂತ ; ನಿಮ್ಗ್ ಹ್ಯಾಗ್ ನಂಬ್ಕೆ ?

ಧೋಂಡೂ : ನಿಮ್ಕಣ್ಣು ಸ್ವಾಮಿ, ನಿಂಕಣ್ಣುಗ್ಗಳ್ನ ಕಿತ್ತು ಆತಂಗ್ ಇಟ್ಟಾಗ್ಗೆ, ಆತನ್ನ್ ಕಣ್ಣುಗ್ಳು . . . ಅಲ್ದೇ ಮೂಗೋ, ತದ್ರೂಪು ತದ್ದೇವೆಯೆ sizeoo. . . (ಯೋಚಿಸುತ್ತಾ) ಆತ್ನೇನ್ ಹೇಳ್ದ ? . . . ಹೂಂ, ಮೂರುಪ್ಪರ್ಗೇ ಮನೆ . . . ಅವರ ಮೂಗು, ಇದೇ ಮೂಗು ಸ್ವಾಮಿ. . . ಆತನ ಮೂಗೂನೂವೆಯೇ . . .

ಕಪ್ಪಣ್ಣ : (ಭೀತಿಯನ್ನು ನಟಿಸುತ್ತಾ) ದೇವ್ರೇ ಗತಿ ! ಇನ್ನಿಲ್ಲೂ ಬಂದು ಬಿಟ್ನೆ ನಮ್ಮಣ್ಣಾ !.... ಸರ್ವನಾಶ... . . ಸಿರಿಸೂಸಿದ್ಲೋ ಭುವಿನಾಶ ! ಅವನ್ಹಣ ಅವನಂತಸ್ತು, ಇದ್ನೆಲ್ಲಾ ನಿನ್ನ ಮುಂದೆ ಬೀರಿ ! (ಕನಿಕರವನ್ನು ಸ್ವರನೇತ್ರಗಳಿಂದ ನಟಿಸಿ, ಧೋಂಡೂರಾಯನನ್ನು ದಿಗ್ದೇಶ ಭ್ರಮಿಸಿಸಿ) ಧೋಂಡೂ, ಬೀಳ್ಬೇಡಾ, ಧೋಂಡೂ, ಈ ಧನ ಪಿಶಾಚೀಗೆ, ದಾಸಾನುದಾಸನಾಗಿ ಬೀಳ್ಬೇಡ ಧೋಂಡೂ ! . . . ಧನ, ನಶ್ವರ ! ನಮ್ಮಣ್ಣನ್ಗೋ ಚಿನ್ನಾಂದ್ರೆ ಚರಂಡೀ ನೀರು . . . ಬೋಕೇ ಕಲ್ಲು . . . ನಿನ್ಗೋ ಬೆಳ್ಳೀ ನಾಣ್ಯ ಬೋಕೆಕಲ್ಲು–ಬರೀ ಬೋಕೆಕಲ್ಲು ಇಲ್ಲಿದ್ರೂನೂವೆ, ಹಣವಿಲ್ಲದಿದ್ರೂವೇ ಗುಣ ಇದೆ. (ಆತನ ಬೆನ್ನನ್ನು ಸವರುತ್ತ) ಆ ಮಾತ್ಯಾಕೆ ಈಗ ! . . . ನಮ್ಮಣ್ಣಾ ಪೆದ್ದು . . . ಕುಬೇರ್ನ ಕನಕಭರಿತ ಕೊಂಪೇಗೆ ಸರಸ್ವತಿ ಸಂಚರಿಸಿದ್ದೂಂತ ಕೇಳಿದೀಯ ಎಲ್ಲಾದ್ರೂ ? . . . ನಾಲ್ಕು ವೇದದಲ್ಲಿ? ಹದ್ನೆಂಟು ಪುರಾಣದಲ್ಲಿ ?... ತೊಂಬತ್ತಾರು ತತ್ವದಲ್ಲಿ ? ಓದಿಧೀಯಾ? ಕೇಳಿಧೀಯಾ ? ಇತಿಹಾಸೇತ್ಯಾದಿಗ್ಳಲ್ಲಿ ?... ನಮ್ಮಣ್ಣ ಇಲ್ಬಂದದ್ದೋ: ತಾನು ಸಿಕ್ಕೊಂಡು ಒದ್ದಾಡ್ತಿರೋ ಸಂಸಾರಸಾಗರದಲ್ಲಿ ನನ್ನೂವೆ ಡುಬಾಯ್ಸೋಕೆ ! . . . ನಾನೋ ! ಇಹಲೋಕದಲ್ಲಿ ನನ್ನ ಪೂರ್ವಲೋಕಗಳ ಸಂಸ್ಕಾರದ ಸಾಲಾನ ತೀರ್ಸಿ ಪರಮಾತ್ಮನ ಪಾದಾರವಿಂದಾನ ಪಡೆಯೋಕೆ ಹುಟ್ದ ಪಾಪರ್ ವೇಷಧಾರಿ, ನಾನು ! ಹೀಗಿರೋವಾಗ್ಗೆ ನನ್ನ, ನಮ್ಮಣ್ಣನ ಜಗಳದಲ್ಲಿ ನೀನ್ಯಾಕೆ ಬರ್ತೀಯಾ, ಧೋಂಡೂ ! (ಗಲ್ಲವನ್ನು ಸವರುತ್ತ ಥಟ್ಟನೆ) ಧೋಂಡೂರಾಯ್ರೆ ; (ಬಿರುಸಾಗಿ) ಅಣ್ಣ ತಮ್ಮಂದ್ರು ನಾವಿಬ್ರು. . . ಅಗ್ರಜಾನುಜರು . . . ಜಯವಿಜಯರು ಜಗಳವಾಡೋವಾಗ ಮಧ್ಯದಲ್ಲಿ ಬರೋ ಹಕ್ಕು ಮಹಾವಿಷ್ಣೂಗ್ಗುಂಟು ! ಮಹಾಲಕ್ಷ್ಮೀಗೂ ಉಂಟು, ನಿನಗುಂಟೆ ?. . . ಬಿಟ್ಟಿಹಿಟ್ಟು ನೀರು, ಹಸಿದ ನನ್ನ ಹೊಟ್ಟೇಗಿಟ್ಟು ಬಿಡಕಾಸೂ ಬೇಡ್ದ ಮಹಾತಾಯಿ, ನನ್ನ ತಂಗಿ, ನಿನ್ನ ಹೆಂಡ್ತೀ, ಆ ಪುನೀತ ಪತಿವರ್ತ ಪ್ರಾಣೀ ಆಕೆ ! ನಿನಗುಂಟೆ ಈ ಹಕ್ಕು ಧೋಂಡೂರಾಯ ?

ಧೋಂಡೂ : ಸ್ವಾಮಿ . . . ಸ್ವಾಮಿ . . . ನನ್ನ ಕುಟುಂಬಾನ ಮುಂದಾಳೋ ಮಹಾಸ್ವಾಮಿ ! ಹಕ್ಕಿಲ್ವೆ ನನಗೆ, ನಿಮ್ಮಿಬ್ರು ಭ್ರಾತೃಗಳ ಮಧ್ಯದಲ್ಲಿ ಬರೋಕೆ ? ಹಕ್ಕೇನಿದೇಂತ ಕೇಳಿದ್ರಲ್ಲಾ . . . ಇಧೆ. ಶ್ರೀರಾಮ ಯಾರು? . . . ವಿಷ್ಣು, ರಾವಣ ಯಾರು ? . . . ಜಯ. ಏತನ್‌ಮಧ್ಯೆ ಬರೋಕೆ ಮಾರುತೀಗೇನ್ ಹಕ್ಕು ? . . . ಭಕ್ತಿ ಸ್ವಾಮಿ, ಮಮತೆ ಸ್ವಾಮಿ ! ಸ್ವಾಮಿ ಪ್ರೇಮ! . . . ತಿರಗೂ ಬನ್ನಿ... ಕಂಬ ಬಿರದು ಹೊರಬಂದ ನರಸಿಂಹ ವೇಷಧಾರಿಯಾದ ಅದೇ ವಿಷ್ಣು. . . ಕೊಲ್ಲೋಕೆ . . . ಹಿರಣ್ಯವೇಷಧಾರಿಯಾದ ಅದೇ ಜಯನ್ನ ! ಅವರವರ ಗಲಾಟೆ ಮಧ್ಯದಲ್ಲಿ ಮೂಗ್ಯಾಕಿಟ್ಟ ಪ್ರಹ್ಲಾದ

ಪ್ರಾಣಿ ? . . . ಭಕ್ತಿ ! ಪ್ರೇಮ !. . . ಸ್ವಾಮಿ !. . . ಮಮತೆ! ಇನ್ನು, ಧ್ರುವ ಕನಕದಾಸ . . . ಒಟ್ನಲ್ಲಿ ರಂಗಣ್ಣೋರೂ ತಾವೂ ಜಯವಿಜಯರ ಹಾಗೆ ಪರಂಧಾಮ ವೈಕುಂಠಾಂಬೋ, ಸಕಲೈಶ್ವರ್ಯಪುರ ಅಂಬೋ ಲಕ್ಷ್ಮೀ ಸಹ ಅಂಬೋ ತಮ್ಮ ಜಹಗೀರು, ಕಾಫಿ, ಟೀ, ಕೋಕೋ ಅಲ್ದೆ ಓವಲ್ಟಿನ್ ಎಸ್ಟೇಟುಗಳು ಇತ್ಯಾದಿ ವಿಷ್ಣುಪಾದಾನ ಹೊಂದಿ ಸಂತೋಷಪಡೋ ಸಂತೋಷಾನ . . . ಆಂಜನೇಯ . . . . ಪ್ರಹ್ಲಾದ. . . ಧ್ರುವ . . . ಇತ್ಯಾದಿಗಳ ಹಾಗೆ ಕಣ್ಣುತುಂಬ ನೋಡಿ, ನನ್ನ್ ಸಂಭ್ರಮದಲ್ಲಿ. . . ಇದೆಲ್ಲ ಯಾಕ್ರೀ . . . ಜಹಗೀರ್‌ದಾರ್ ರಂಗಣ್ಣ ಕಪ್ಪಣ್ಣಗಳ ಮಧ್ಯೆ ಹೋಟಲ್ ಕೀಪರ್ ಪಾಪರ್ ಧೋಂಡೂ ಯಾಕ್ ಮೂಗಿಡತೀಯಾಂತ ಅಂಬೋದಲ್ವೆ ತಮ್ಮ ಪ್ರಶ್ನೆ ? "ಹೂವಿನ ಜೊತೇಲಿ ನಾರೂನು ನಾಕ ಸೇರ್ತೂ"ಂಬೋ ಸಾಮತಿ ಅಲ್ಲ ನಾ ಹೇಳತಿರೋದು. ನಾಲ್ಕು ಹೂವಾಗಲೀ ನಲವತ್ತು ಹೂವಾಗ್ಲೀ, ಪರಮಾತ್ಮನ ಕಂಠಕ್ಕೆ ಹಾರಾ ಹಾಕೋಕೆ ಪಾರಿಜಾತ ಪುಷ್ಪಗಳೇ ಆಗ್ಲಿ, ಅವುಗಳನ್ನೆಲ್ಲಾ ಸೇರಿಸಿ, ಪೋಣಿಸಿ ಹೊಂದಿಸೋಕೆ ನಾರಿಲ್ಲದಿದ್ದರೆ ಹಾರಾ ಎಲ್ಲೀದು ? ಅರ್ಥಮಾಡ್ಕೊಳ್ಳಿ !

ಕಪ್ಪಣ್ಣ : ನೀರೇನು, ನಾರೇನು ! ನಾಕಕ್ಕೆ ಹೋಗಬೇಕೂನ್ನೋ ಹೂವ್ಗಳಿಗೆ ದಾರಿ ತೋರಸೋನಾರು ಕೊಬ್ಬೀ ಕೊಬ್ಬೀ ದಪ್ಪವಾಗೀ ದಪ್ಪವಾಗೀ ಘಟ್ಟಿ ಹಗ್ಗವಾಗಿ ತನ್ನ ಕುತ್ತಿಗೇಗೆ ತಾನೆ ನೇಣುಹಾಕ್ಕೊಂಡು ಸತ್ತಂತೇಂಬೋ ಸಾಮತಿ ಕೇಳಿಧೀಯಾ ಧೋಂಡೂ ? ಹೂವೆಲ್ಲಿ ? ನಾರೆಲ್ಲಿ ? ಬಾಳೆಮರದ ನಾರು. . . ತನ್ನ ಪಾತಿ ದಂಟು, ತನ್ನ ಕಂಬ, ತನ್ನ ಹೂವು, ಹೀಗೆ ತನ್ನಷ್ಟಕ್ಕೆ ತಾನೇ ಇರ್ದೆ, ತನ್ನ ತನ್ನ ಕೊಂಪೇನ ಮರೆತು, ಈ ಬಾಳೇಮರ ತನ್ಗೆ ಅಂದದ. . . ಸಕಲೈಶ್ವರ್ಯಪುರ, ರಮ್ಡೋಲ್ ರಂಗಣ್ಣೋರು, ಖಯಾಲಿ ಕಪ್ಪಣ್ಣೋರು ಕಾಫಿ ಎಸ್ಟೇಟು ಇತ್ಯಾದಿ ಕಲ್ಪದ್ರುಮಗಳ ಹಣ್ಣಿಗೆ ಕೈ ಚಾಚ್ತಾ, ತಾನು, ಹೋಟೆಲ್ ಕೀಪರ್ ಪಾಪರ್ ಧೋಂಡೂರಾಯಾಂಬೋದ್ನ ಮರ್ತು, ಕನಕದಿಂದ ಕನಕಾನ್ನುಂಗಿ, ಕೊಬ್ಬೀ ಕೊಬ್ಬೀ ತೇಗತಿರೋ ಕಪ್ಪಣ್ಣ ರಂಗಣ್ಣಗಳ ಸಹವಾಹ, ತಪ್ಪೂ ! ಬೇಡ, ಧೋಂಡು ಬೇಡ ! ಧೋಕಾ ತಿಂತೀಯ ಧೋಂಡೂ ! ದುಡ್ಡೂಂದ್ರೆ ದೂರ ಹೋಗು. ಹೃದಯಾಂದ್ರೆ ಹತ್ತಿರ ಬಾ ಇದು ತತ್ತ್ವ. ನಮ್ಮಣ್ಣನ ಬಾಯೆಲ್ಲ ತೂತು ! ನಮ್ಮ ಕುಟುಂಬದ ಗುಟ್ಟನ್ನ ಏನೇನ್ ಬಯಲಿಗ್ಬಿಟ್ಟ ನಮ್ಮಣ್ಣ ? ಸತ್ಯಂವದ ! ದಿಟ ಬೊಗಳು !

ಧೋಂಡೂ : ತಮ್ಮ ದೊಡ್ಡ ಕುಟುಂಬದ ಗುಟ್ಟು ತಮ್ಮ ದೊಡ್ಡ ಕುಟುಂಬದ್ದು. ಆದ್ರೂನೂವೆ ತಮ್ಮ ಕುಟುಂಬದ ಸಂಬಂಧವಾದ ಒಂದು ದೊಡ್ಡ ಲಗ್ನಕ್ಕೆ ತಾವು ಸಕಲೈಶ್ವರ್ಯಪುರದಲ್ಲಿ ಇರಲೇಬೇಕು ಎಂದು ತಮ್ಮ ಅಗ್ರಜ ರಂಗಣ್ಣೋರು ಆಜ್ಞಾಪಿಸುತ್ತಿರುವಲ್ಲಿ ಶಿವಮೊಗ್ಗ ರೈಲು ೮-೩೦ ; ಈಗ ೭-೧೫ ಲಗ್ನ ಪ್ರಾತಃ ೯-೩೦ ದುರ್ಗೀ ಗುಡೀಂದ್ರು ವಧುಮನೆ ! ದಮ್ಮಯ್ಯ ಹೊರಡಿ ಮದ್ವೇಗೆ ! ಮುಂದೆ ತಮ್ಮ ನನ್ನ ಅನ್ಯೋನ್ಯ ಅನನ್ಯೋನ್ನದ್– ಬಾಬ್ತುಗಳು ತಮ್ಮಣ್ಣಾವರೆದುರಿಗೆ ! ಸಧ್ಯ ಶಿವಮೊಗ್ಗಾ ರೈಲೂ ಹತ್ತೇ ಬಿಡ್ಬೇಕು ಈವತ್ ರಾತ್ರಿ ತಾವು !!!

ಕಪ್ಪಣ್ಣ : ನನ್ನ fareಉ?

ಧೋಂಡೂ : ನಾನ್ ಕೊಡ್ತೇನೆ !

ಕಪ್ಪಣ್ಣ : ಜಟ್ಕಾ ಛಾರ್ಜು ?

ಧೋಂಡೂ : ನಮ್ಮ ಯಾಕೂಬೂ. . . ನಮ್ಮ. . . ಹೋಟಲ್ ಯಾಕೂಬು. . . ಖಾಯಂ ಯಾಕೂಬು, ಕೆಳಗ್ಕಾದಿಧಾನೆ . . . ಛಾರ್ಜ್ ನನ್ನ ಭಾರ.

ಕಪ್ಪಣ್ಣ : ಹಾಗಾರೆ, ನಮ್ಮ ಜಹ್ಗೀರ್ ಪ್ರಾಂತ್ಯದಲ್ಲಿ ಲಂಗೋಟಿಧರನಾಗಿ ಇಳೀಲೇ ನಾನು ! ನಮ್ಮಣ್ಣನ್ ತಮ್ಮ ! . . . Public platformನಲ್ಲಿ . . D. C. ಇರ್ತಾರೆ, expect ಮಾಡ್ತಾ ! . . . ದಾಯಾದಿಗಳ ಮನೇ ಮದ್ವೆ ! ಒಂದು ಜೊತೆ ಧೋತ್ರ ಇಲ್ಲ ವರನ್ಗೆ, ಒಂದು ಭಾರಿ ಸೀರೆ ಇಲ್ಲ ವಧೂಗೆ . . . ಇವುಗಳ್ನ ಒಂದ್ ವೇಳೆ ಪರಮಾತ್ಮ ದಯಪಾಲಿಸಿದ್ರೂನೂವೆ ?. . . ಹರುಕು ಕೊಳಕ್ಲು ಪಂಚೆ ಸುತ್ಕೊಂಡು ಇಳಿಯೋದೆ ಮದ್ವೆ ಮಂಟಪ್ದಲ್ಲಿ?. . . ಇಲ್ಲಾ, ನಮ್ಮ ಕುಟುಂಬದ್ ಸಂಪ್ರದಾಯದ ಪ್ರಕಾರ ಹೊಸ್ಸಾಹೊಸ ಹತ್ತು ಎಂಟು ಇಲ್ದಿದ್ರೂನೂವೆ, ಕನಿಷ್ಠ ಒಂದು ಎಂಟು ಆರು ಕೂಡ ಇಲ್ದೆ ಅರ್ಧಂಗಲವಾದ್ರೂ ಕಲಾಪತ್ತು ಅಂಚಿಲ್ದೆ ! ಒಟ್ಟಲ್ಲಿ ಧೋಂಡೂ, ಚರಂಡೀಲಿ ಹುಟ್ಟಿ . . . ಹೋಟಲ್ ಕೀಪರ್ ಆದರೂ ಆದ ನೀನು ಮಹನೀಯ, ಮಾನ್ಯ ! ಮೂರುಪ್ಪರಿಗೆ ಮನೆತನ್ದಲ್ಲಿ ಹುಟ್ಟಿ ಲಕ್ಷಾಂತರ ಪಿತ್ರಾರ್ಜಿತ ಸ್ವತ್ತ್ನ ಧಿಕ್ಕರಿಸಿ ಚರಂಡೀಗೆ. “ಪರೋಪಕಾರಾಯ

ಮಿದಂ ಶರೀರಂ” ಅಂದ್ವಾಗೆ ನೀನು ಹುಟ್ಟಿದ ಚರಂಡೀಲಿ. ನಿನಗೋಸ್ಕರಾ ಅವತರಿಸಿದೇನಲ್ಲ ! ಇದೂ ಪರಮಾತ್ಮನ ಲೀಲೆ ! ಪ್ರಹಸನ ! ನೀನು ನನ್ನ ಕೈಲಿ ನೂರು ಚಿಲ್ರೆಯಾಗಿದ್ದರೂ ನಗದಾಗಿ ಇಟ್ಟೀಯ. ನಿನ್ನ ತಗರದ ಪೆಟ್ಗೇಲಿ ವರನಿಗೆ ಧೋತ್ರ ವಧೂಗೆ ಸೀರೆ ಅಲ್ದೆ ನನಗೊಂದು ಎಂಟು-ಆರು ಹೊಸಾಹೊಸ ಇಟ್ಟು ರವಾನಿಸೀಯಾ ! ಧೋಂಡೂ, ಯಾಕೀ ಭ್ರಾಂತಿ ? ಯಾಕೀ ಬಿಸಿಲು ಕುದುರೆ ಮೇಲೆ ನನ್ನ ಹತ್ತಿಸ್ತಿದೀಯಾ? ನಮ್ಮಣ್ಣನ್ಗೋ ನಮ್ಮ ಎಸ್ಟೇಟ್ನಿಂದ ಹುಯ್ಯತ್ತೇ ಸ್ವರ್ಣ ವೃಷ್ಟಿ ! . . . ಅವನಿಗೋ ನಿನ್ಮೇಲಿಷ್ಟ. . . ಸಾವಿರ ಸಾವಿರ ನಿನಗ್ ಕಳಸ್ತಿರ್ತಾನೆ . . . ಸಂತೋಷ ! ನಿನಗೂ, ನಿನ್ನ ಹೆಂಡ್ತಿಗೂ, ನಿನ್ನ ಮಕ್ಳಿಗೂ ಸಂತೋಷ ! ತಿನ್ನಿ ! ತೇಗಿ ! ಕೊಬ್ಬಿ ! ಆದ್ರೆ ನಿಮ್ಮ ಸಂತೋಷ್ದಲ್ಲಿ. . . . ಕೈಲ್ಲೊಂದು ನೂರ್ರೂಪಾಯಿ ಕೂಡ ಇಲ್ದೆ ವರನಿಗೊಂದ್ ಜೊತೆ ಪಂಚೆ, ವಧೂಗೊಂದು ಸೀರೆ, ತನಗೆ ಎಂಟು-ಆರು? ಒಂದೊ ಆರು-ನಾಲ್ಕು ? ಬೇಡ ನಾಲ್ಕು-ಎರಡು ? ಎರಡು-ಒಂದು? ಕೂಡ ಇಲ್ದೆ ಒಂದು ಅರ್ಧ-ಅರ್ಧ ಲಂಗೋಟಿ ಉಡ್ದಾರ ಕೂಡ ಇಲ್ದ ನನ್ನ, ಧೋಂಡೂರಾಯ್ರೆ! ದಾಯಾದಿಗ್ಳ ಅಪಹಾಸ್ಯಕ್ಕೇಂತ ರವಾನಿಸ್ತೀರಾ?

ಧೋಂಡೂ :(ಕಪ್ಪುವಿನ ಪಾದಗಳಿಗೆರಗಿ) ದಮ್ಮಯ್ಯ ನೀವಿಲ್ಲೇ ಇರಿ ! ರುದ್ರೂ!

[Little Rudru, the servant enters]

ಯಜಮಾನ್ರನ್ನ ಹೊರಕ್ಬಿಡಬೇಡ !... ಕೋಪಿಸ್ಕೋಬೇಡಿ.

[ನಿಷ್ಕ್ರಮಣ]

ರುದ್ರೂ : ಸ್ವಾಮಿ, ಆವತ್ತು ಬೀಡಿ ಕೊಟ್ರಲ್ಲಾ ನಂಗೆ ! ಈಗ ಬೇಕಾ ? . . . [Produces a beedi kattu] ಮಂಗಳೂರು ಲವಂಗ . . .

[ಬೀಡಿಯನ್ನು ನೀಡುವನು]

ಕಪ್ಪಣ್ಣ : ರುದ್ರೂ, ಎಷ್ಟ್‌ದಿನ ಈ ಹಾಳ್ ಬೀಡಿ ನಿನ್ನ ಹಣೇಬರ ? . . . [ಜೋಬಿನಿಂದ ’ಸಿಸರ್ಸ್’ ಪ್ಯಾಕೆಟ್ಟನ್ನೂ, ಬೆಂಕೀ ಪೆಟ್ಟಿಗೆಯನ್ನೂ ಹೊರ ತೆಗೆದು, ಸಿಗರೇಟನ್ನು ಹಚ್ಚಿಕೊಳ್ಳುತ್ತಾ] ಸಿಗರೇಟ್ ಯೋಗ್ಯತೆ, ಅದೂ ’ಸಿಸರ್ಸ್’, ಯಾವಾಗ ಸೇದೋದೊ ನೀನು, ರುದ್ರೂ ?(fingering in inner pocket) (aside) ! Thank God ! ಸುಬ್ಬೂ ಮರ್ತ್ಹೋಗಿ long coat pocketಲಿ

ಬಿಟ್ಟಿದ್ದ 'ಸಿಸರ್ಸ್' ; ಮ್ಯಾಚ್‌ಬ್ಯಾಕ್ಸು ! ಕಕ್ಕಸ್ಸು, ಅಂಗಳ, ಹಜಾರ, ಜಗಲಿ, ರೂಂಗಳು ಗುಡಿಸಿಕೊಂಡು ಎಂಟ್ ತಿಂಗ್ಳ ಸಂಬ್ಳ ಬಾಕಿ ಇಟ್ಕೊಂಡಿರೋ ಈ ಕಿರಾತನಿಗೆ ಕೂಲಿಕೆಲ್ಸ ಮಾಡ್ತಿರೊ ರುದ್ರೂ, ನಿನಗೆ ಜಟ್ಕಾದೋರು ಸೇದೊ ಬೀಡಿ ಬಿಟ್ಟು, ಜಂಟಲ್‌ಮನ್ ಸೇದೊ 'ಸಿಸರ್ಸ್' ಸೇದೋ ಯೋಗ್ಯತೆ ಯಾವಾಗ ಬರೋದು, ರುದ್ರೂ?

ರುದ್ರೂ : ನನಗೆಂಗ್ ಗೊತ್ತ್ ಸ್ವಾಮಿ . . . ಯಾವಾಗಾಂತ ?

ಕಪ್ಪಣ್ಣ : ನಾನ್ಹೇಳ್ತೇನೆ ರುದ್ರೂ, ಈವಾಗ ! ಈ ಕ್ಷಣದಿಂದ . . . ನಾನು ಹೇಳೋ ಹಾಗೆ ಕೇಳೊ ? !

ರುದ್ರೂ : ಅಂಗೇ ಆಗ್ಲಿ–ಸ್ವಾಮಿ !

ಕಪ್ಪಣ್ಣ : ನನ್ನ ಪೆಟ್ಗೇನ ಯಾಕೂಬ್ ಜಟ್ಕಾಲಿಟ್ಟು. . . ಒಂದರ್ಧ ಗಂಟೆಯಾದ್ರೂ ರಾಯರ್ನ ಮಾತಾಡ್ಸಿರು. ಯಾಕೂಬ್ ಕೈಲಿ ಒಂದು ರೂಪಾಯಿ ಕಳಸ್ತೀನಿ. ಒಪ್ತೀಯಾ ? ನಂಬ್‌ತೀಯಾ?

ರುದ್ರೂ : "ಊ" ಸ್ವಾಮಿ !

(Enter ಧೋಂಡೂ with tin box)

ಧೋಂಡೂ : ಸ್ವಾಮಿ, ಇದು ತಮ್ಮ ಪೆಟ್ಗೆ . . . ಬಂಗಾರ, ಬಂಢಾರಗ್ಳು ಇರೋ ಕುಟುಂಬ್ದಲ್ಲಿ ಉದ್ಭವಿಸಿದ ತಮಗೆ ಈ ತಗರದ ಪೆಟ್ಗೆ ಮೇಲೆ ಯಾಕೆ ಕ್ಯಾಸರಿಕೇನೋ ನನಗೆ ಗೊತ್ತಿಲ್ಲ ! ತಾವು ತಮ್ಮ ಕುಟುಂಬದ ಲಗ್ನಕ್ಕೆ ತಾವಿರ್ಲೇಬೇಕಾದ ವಿಷಯಾನ ಅರಿತು ವಧೂ, ವರ, ಅಲ್ಪ ತಮ್ಗೂ ಬೇಕಾದ ವಸ್ತ್ರಗಳೂ . . . ಕಪ್ಪಣ್ಣೋರೆ . . . ಹೊಸಾ ಹೊಸ್ದು ! ನನ್ನ ಲಗ್ನದಲ್ಲಿ ನಮ್ಮಾವ ಕೊಟ್ಟ ಜೋಡಿ ಪಂಚೆ, ನಾಳಿನ ವರನ್ಗೆ ! . . . ನನ್ನ ಹೆಂಡ್ತೀಗೆ . . . ಪುನೀತ ಪತಿವರತಾಂದ್ರಲ್ಲಾ . . . ಆಕೆ ಜನ್ಕ ಕೊಟ್ಟ ಸೀರೆ ! ಜನ್ಕಾಂತೀನಲ್ಲ ? ... ಆಶ್ಚರ್ಯ ! . . . ಸೀತಾಬಾಯಿ ಹೆಸ್ರು! . . . ನೀರಾಜಿ ಕುಪ್ಸಾ ಸಮೇತ ನಾಳಿನ ವಧೂಗೆ . . . ಅಲ್ದೆ . . . ನನ್ನ ಮೊದ್ಲ ದೀಪಾವಳೀಗೆ ನನ್ನ ಮಾವ ಕೊಟ್ಟ . . . ಎಡ್ರೂವರಂಗುಲ ಅಂಚು ಜರತಾರಿ ಲ-೬ನ್ನ ತಮಗಾಗಿ ಹಾಕಿ ಇದೇ ಪೆಟ್ಗೇಲಿ ಕಟ್ಟಿಧೇನೆ. ಇಕೋ

ಯೆತ್ ನನ್ ಶಕ್ತಿ ಇರೋ ಸುವರ್ಣ ೧೦೫ ರೂಪಾಯಿ ! ರುದ್ರು. . ಹೊತ್ಕೊಳ್ಳೊ ! ಅಲ್ದೆ ಈ ಕೂಜಾ ತುಂಬ ಹಾಲು. ಊಟಾ ಆಗ್ಲಿಲ್ಲ ತಮಗೆ. ತುಂಕೂರ್‍ನಲ್ಲಿ ನೀರು ಸಿಕ್ಕುತ್ತೆ. ಈ ಟಿಫನ್ ಕ್ಯಾರಿಯರ್ ತುಂಬ ಎತ್‌ತನ್ ಶಕ್ತಿ, ಎತ್ ತನ್ನ ಭಕ್ತಿ ಪೂರ್ವಕವಾಗಿ ಅನ್ನ, ಹುಳಿ, ಸಾರು, ಮೊಸ್ರು . . . ಅಲ್ದೆ ಪಲ್ಯೇತ್ಯಾದಿ ವ್ಯಂಜನಗಳು ಸಹಿತ . . . ಕಾಣಿಕೆ ತಮ್ಗೆ . . "ಪುನೀತ ಪತಿವರ್ತ ವಸ್ತು" ಅಂದ ತಮ್ಮ ತಂಗೀ ಕಾಣಿಕೆ. ಯಾಕೂಬ ತುರುಕ. ರುದ್ರ ಶೂದ್ರ . . . ತಮ್ಮ ಕೈಯಲ್ಲೇ ಎರಡ್ನೂ ಹಿಡಕೊಂಡು ತಮ್ಮ ಕುಟುಂಬಾನ ಸೇರಿ, ನಿಮ್ಮ ಧರ್ಮಾನ ಸಲ್ಲಿಸಿ ! ತಮ್ಮಣ್ಣನೋರ ತಂತೀಲಿ ನಾಳೆ ಬರೋ ಸಹಾಯ ಸಹಸ್ರಾಷ್ಟದಿಂದ ನಮ್ಮ ಕುಟುಂಬ ರುದ್ರೂ ಸಮೇತ ಬಂದ್ ಸೇರ್‍ತೇವೆ ! ದಯಮಾಡಿ ! [Places the box on Rudru's head, and Rudru exits; and then placing notes in Kappanna's hand and prostrating]

ಹರ್‍ಸೀ, ಮಹಾಸ್ವಾಮಿ ! ನನ್ನೂ ನನ್ನ ಕ್ರಿಮಿ ಕುಟುಂಬಾನೂ ಹರ್‍ಸಿಬಿಟ್ಟು ಹೋಗಿ ಬನ್ನಿ ಮಹಾಸ್ವಾಮೀ, ಹೋಗಿ ಬನ್ನೀ ಏನು ? ಹೋಗಿ! ಬರ್‍ತೇವೆ!. . . ತಾವು ತೆರಳಿ, ನಾಳಿನ್ ಲಗ್ನಕ್ಕೆ . . ನಾಳೆ ರಾತ್ರಿ ಬಂದ್ಸೇರ್‍ತೇವೆ ನಾವೆಲ್ಲಾವೆ. ರಂಗಣ್ಣೋರ್‍ಗೆ ಹೇಳಿ. ಆತನ ಆಜ್ಞೇನ ಆಪಾದಮಸ್ತಕ ಆವಹಿಸಿಕೊಂಡು, ಆತನ ಅನುಜನ್ನ ಎದಾಜ್ಞಾ ರವಾನಿಸಿಧೇನೇ ಅಂಬೊ ನನ್ನ ಭಕ್ತಿ, ಪ್ರೇಮ ಇತ್ಯಾದಿಗಳ್ನ, ಆತ್ನ ಪಾದಪದ್ಮಗಳಿಗೆ ಸಲ್ಲಿಸ್ಬಿಡಿ.

[ರುದ್ರುವು ಪೆಟ್ಟಿಗೆಯನ್ನೆತ್ತಿಕೊಂಡು ನಿಷ್ಕ್ರಮಿಸುವನು.]

ಕಪ್ಪಣ್ಣ : ಧೋಂಡೂ . . . ಚರಂಡೀಲಿ ಹುಟ್ಟಿದ್ರೂ ನೀನ್ ಜಂಟಲ್‌ಮನ್ ! ಹಂದಿಯಾಗಿ ಹುಟ್ಟಿದ್ರೂ ಹರಿ, ನರಹರಿ, ಜಂಟಲ್‌ಮನ್ನೇ ! ತತ್ಕಾಲಕ್ಕೆ, ತತ್‌ಯುಗಕ್ಕೆ, ಎತ್ಕೋತ ತತ್ಸಮಯಕ್ಕೆ ತತ್ತ್ ತತ್‌ಕ್ಷಣಕ್ಕೇ ಹ್ಯಾಗಿರ್‍ಬೇಕೋಹಾಗೇ ಇರ್‍ಬೇಕಾದ ಮೇಲ್ವಂಗ್ತೀನ ಹಾಕಿದ್ದು ಮುಕುಂದ, ಮಾಧವ, ವಿಷ್ಣು. . . ಯಾಕೆ ? ಸ್ಥಿತಿಕರ್ತ ! ಬ್ರಹ್ಮಾ ಸೃಷ್ಟಿಸ್ತ ಪ್ರಪಂಚಾನ ಮುಂದಕ್ಕೆ ಧೂರ್ಜಟಿ, ಲಯಕರ್ತ ಧ್ವಂಸ ಮಾಡೋಕೆ, ಪ್ರಕೃತೀನ ತಯಾರ್‍ಮಾಡೋದು ಸ್ಥಿತಿಕರ್ತನ ಧರ್ಮ ! ಜಂಟಲ್‌ಮನ್ನಾಗಿಯೇ ಹುಟ್ಟಿದ ನನ್ನೂ ನನ್ನಗ್ರಜನ್ನೂವೆ ನೀನು ಸಂಧಿಸಿದ ಕ್ಷಣ್ವೇ ಈ ನಿನ್ನ ತಾರುಣ್ಯ ಕರುಣಾನ ಕನಕದ್ ಮೂಲ್ಕಾ ತೀರಿಸ್ತೀನಿ ಅದುವರೆವಿಗೂ, ನಮ್ಮಣ್ಣ ರಮ್ಡೋಲ್ ರಂಗಣ್ಣ, ರಂಗಣ್ಣನೇವೇ ಕಯಾಲಿ ಕಪ್ಪಣ್ಣ, ಕಪ್ಪಣ್ಣನೇವೇ ಸಕಲೈಶ್ವರ್ಯಪುರ್‍ದ ಧನೇಶ್ವರ ರಂಢೋಲ್ ರಂಗಣ್ಣ, ಧೋಕ ತಿಂದು, ಈಗ ತಿನ್ತಾ . . . . ಇನ್‌ಮುಂದಕ್ ತಿನ್ನೋ ಧೋಂಡು ಧೋಂಡೂ ನೇನೆ. ಈವತ್ ರಾತ್ರಿಯೆ ನಿನ್

ಕಣ್ಮುಂದ್ ನಿಂತು 'ಗುಂ' ಆದ ರಂಢೋಲ್ ರಂಗಣ್ಣಾ ರಂಗಣ್ಣನೇವೆ. ನಾನು ನಾನು ನಾನೇ. ಮುಖ್ಯನಾಳೆ ರೈಲ್ನಲ್ಲಿ ಸೇರು. ಸಕಲೈಶ್ವರ್ಯಪುರ್ದಲ್ಲಿ ನಾವೆಲ್ಲಾ ಸಂವಾದಿಸೋಣ. ಅಲ್ಲಿ ನಮ್ಮಣ್ಣ ನಾನೂ-ನೀನೂ-ತ್ರಿಮೂರ್ತಿಗಳೂ. . . ಸೃಷ್ಟಿಸ್ಥಿತಿಲಯರ್‌ಗ್ಳೂ, ನಮ್ಮ ಕುಟಂಬ್ದ ಮೂರು ಕೋಟಿ ಸ್ಥಿತಿಯ ವೆಚ್ಚಾನ ಇತ್ಯರ್ಥ ಮಾಡ್ಕೋಳ್ಳೋಣ.

ಧೋಂಡೂ : ನಾಳೇ ಮಾತ್ ನನ್ಭಾರ ! ಈವತ್ತಿನ ರೈಲ್‌ಗೆ ನಿಮ್ಮನ್ನ ಸೇರ್ಸೋದು ನನ್ಮೊದಲ್ಲ್ವೇ ಭಾರಾ. ಹೊರಡಿ ! ಯಾಕೂಬ್ ಕಾದಿದಾನೆ. ಕುದುರೆ ಚಮ್ಕಾಯ್ಸ್ತಿದೆ.

[ಎಂದು ಕಪ್ಪಣ್ಣನನ್ನೂ ಎಳೆದುಕೊಂಡು ಹೋಗುವನು.]

[ಫರದೆಯು ಬೀಳುವುದು. ನಿಧಾನವಾಗಿ ಅದೇ ಸ್ಥಾನದ ದ್ವಿತೀಯ ರಂಗಕ್ಕೆ ತಿರುಗಿ ಏಳುವುದು]

ದ್ವಿತೀಯ ರಂಗ

[Found discovered ಧೋಂಡೂ, squatting on an inverted ಹಂಡೆ and ರುದ್ರೂ standing in abject attendance]

ಧೋಂಡೂ : ಹಾಗಾದರೆ ನಿಮ್ಮಜ್ಜಿ ತಯಾರಿ? ನಾಳೆ ರೈಲ್ಗೆ ! ಇಲ್ಲಿ... ಹೇಗೋ ರುದ್ರಾ ! ಜಹ್ಗೀರ್‌ದಾರ್ ಕಪ್ಪಣ್ಣೋರು ? ಹೇಗೋ ? ಆ?

ರುದ್ರೂ : ಚಿನ್ನದಂತಾ. . . ಮನ್ಸ. . . ಸ್ವಾಮಿ !

ಧೋಂಡೂ : ನಾನು ?

ರುದ್ರೂ : ಬೆಳ್ಳಿ ಅಂಥಾ ಮನಸ್ಸು ! ಯಾಕೂಬ್ ಕಬ್ಣ ! ನಾನೊಬ್ನೇ ಸ್ವಾಮಿ, ಇತ್ತಾಳೆ ಅಂಗೆ ಅಲ್ಲಾಡ್ತಿರೋದು ; ಅಜ್ಜಿ ಅಟ್ಟೀಲಿ, ತಾವು ಇಲ್ಲಿ, ಇಂಗೆ ಅಂಗೆ ಅಲ್ಲಾಡ್ತಿರೋದು.

ಧೋಂಡೂ : ರುದ್ರಾ, ನಿನ್ನೂ ನಿಮ್ಮಜ್ಜೀನೂ, ನನ್ನೂ ನನ್ಕುಂಟುಂಬಾನ್ನೂ ಕಾಪಾಡೋ ಪ್ರಾಣೀನೂ ನಾಳೆ ತೋರಿಸ್ತೇನೋ !

ರುದ್ರೂ : ನಾಳೇನ ಸ್ವಾಮಿ ?

ಧೋಂಡೂ : ಹೌದೊ, ನಾಳೆ ಬೆಳಗ್ಗೆ ನೀನೂ, ನಿಮ್ಮಜ್ಜಿ, ನಾನೂ, ನನ್ನ್ ಕುಟುಂಬ ಅರಸೀಕೆರೆ ರೈಲ್‌ಹತ್ತಿ ಸ್ವರ್ಗಾನ್ ಸೇರ್ತೇವ್ಯೋ . . . ಮಂಕು . . . ಯಾರದು?
[Enter ಯಾಕೂಬ್—ಕರೀಕುಚ್ಚು ವಿರಾಜಿತ ಕೆಂಪು ಕುಲಾವಿ ಬಿಳಿಯ ಕುರ್‌ಥಾ, ಡೀಲಾಷರಾಯಿ ಸಮೇತ, ಬಿದುರು ಕೋಲಿಗೆ ಕಟ್ಟಿದ ಹೊಸೆದ ನೂಲಿನ ಕಂಚಿ ಆಯುಧವನ್ನು circus ring masterನಂತೆ “ಛಟಾರ್” “ಪಟಾರ್" ಎಂದು ಬಾರಿಸುತ್ತಾ]

ಯಾಕೂಬ್ : ಕ್ಯಾ ಸಾಮಿ ಕಾಲಭೈಸಾಮಿ . . . ಕಪ್ಪಣ್ಣಾ ಅವ್ರು . . . ಮೈಕ್ಯಾ ಬೋಲುಂ ?!

ಧೋಂಡೂ : (ಚಮಕಿತನಾಗಿ) ಯಾಕೂಬಾ ! . .. ಬೇಕೂಫಾ (ಎನ್ನುತ್ತಾ ತಾನು ಕೂತಿದ್ದ ಹಂಡೆಯ ನಿತಂಬವನ್ನು ಚಿಟ್ಟು ಲಂಘಿಸಿ) ರೈಲ್ ಸಿಕ್ತೇನೋ ?

ಯಾಕೂಬ್ : ಜೀ !... ಹಾಂ !... ಸ್ವಾಮಿ !

ಧೋಂಡೂ : ಸೀಟ್ ಸಿಕ್ತೇ !

ಯಾಕೂಬ್ : ಜೀ!... ಹೂಂ ! . . . ಸ್ವಾಮಿ

ಧೋಂಡೂ : ಸಂದೂಕ, ಟಿಕೆಟ್ ವಗೈರೆ . . .

ಯಾಕೂಬ್ : ಕ್ಯಾ ಸಾಮಿ? ಕ್ಯಾ ಕಂಬಖ್ತ್ ಸಮಜ್ಲಿಯ. . . . ಕಾಲಾಭೈಸಾಮಿಕೂ? ಮೈಕ್ಯಾ ಕಹೂಂ . . . . ! ಇಸೆಕೆಂಡ್ ಕ್ಲಾಸ್ ಗಾಡಿ ಸಾಮಿ ! ಕಪ್ಪಣ್ಣ ಸಾಮಿ ಹತ್ಕೊಂಡಿ ಮೂರುಗೋರ ಸಾಹೇಬುಂ . . . ಫಿರಂಗಿ ಆಫೀಸರ್ ಲೋಗ್ . . . . ಗೋರಾಲೋಗ್ . . . ಸಾತ್‌ಮೆ . . . ಜೊತೇಲಿ! . . . . ಧೋಂಡು ಸಾಮಿ ! . . . ಸಾಬ್‌ಪೂಛೆ . . . . "ಏನು ಯಾಕೂಬ್, ನಿನ್ನೂದ್ಗೆ ಜೋಡಿ ಕುದ್ರೆ, ನಾಲ್ಕು ಕುದ್ರೆ, ಡಬ್ಬಲ್ ಜೋಡಿ ಕುದ್ರೆ, ಹಕಾಲ್ಬೇಕು ಬರ್‍ತೈತೆ?" . . . . ಏನು ಮತ್‌ಲಬ್ ಸಾಮಿ !?

ಧೋಂಡೂ : ಒಃ ! ಓಹೋ ! ನೀನೂವೆ ಸೇರ್ಬಿಟ್ಯಾ ! ನಾನು, ನನ್ ಕುಟುಂಬ, ರುದ್ರಾ ಅವ್ನಜ್ಜಿ ಯಾತ್ರೇಲಿ ? ಹೇಳ್ತೇನ್ ಕೇಳೋ ? ಯಾಕೂಬಾ ! ಬೇಕೂಫಾ . . . ನರೀ ಮುಖ ನೋಡಿದ್ದೆಯೋ ಈವತ್ ಬೆಳಗ್ಗೆ ! ನಾನು, ಕಾಫಿ ಎಸ್ಟೇಟ್ ಏಜಂಟು, ರುದ್ರು, ಅವರಜ್ಜಿ ಜಹಗೀರ್‌ದಾರ್ ರಮ್ನೋಲ್ ರಂಗಣ್ಣೋರ ಒಂದುವರೆ ಕೋಟಿ ರೂಪಾಯಿ ಭಾರ ಯಾಕೂಬ, ನಿನ್ನಣೇಲಿ ಬರೆದಿದಾನೆ, ನಿಮ್ಮ

’ಅಲ್ಲಾ’, ಎಲುಬು ತೋರಸ್ಕೊಂಡಿರೋ ಸಾಯೋಕುದ್ರೇನೂ ಅದು ಎಳೀತಿರೋ ಮುರುಕಲ್ ಗಾಡೀನ್ನೂ ಧರ್ಮಾಂಬುದೀಲ್ ಒಗ್ದು ನಾಲ್ಕು ಕುದ್ರೆ ಸಾರೋಟ್ನ...

ಯಾಕೂಬ್ : ಹಕಾಲ್ನೇಕಾ . . . ?

ಧೋಂಡೂ : ಹೌದು . . . ಹಕಾಲ್ನೋದು . . . ನಿನ್ನ ಹಣೇಲಿ . . .

ಯಾಕೂಬ್ : ಕಿಸ್ಮತ್ ? (ದಂತಾವಳಿಯನ್ನು ಪದಣಿಸಿ ನಗುವನು)

ಧೋಂಡೂ : ಯಾಕೂಬಾ, ನಾಳೆ ! ರುದ್ರೂ, ಅಜ್ಜೀ ಸಮೇತಾ ; ನಾನು ನನ್ಹೆಂಡ್ತಿ ಸಮೇತ ; ನೀನು ನಿನ್ಹೆಂಡ್ತಿ ಮಕ್ಳಸಮೇತ . . .

ಯಾಕೂಬ್ : (ಅಡ್ಡಮಾತಾಗಿ) ಮಾಫ್ ಕೀಜಿಯೆ. ಚಾರ್ ಹೆಂಡ್ತಿ, ಒಂದು ಬಚ್ಚಾ . . ಬೇಟ–ನಾಕ್ ಕಾನೋ ಆಂಖೊ. . . ಮೇರೆ ಸರ್‍ಕಾ ಬೇಟ . . !

ಧೋಂಡೂ : ಓಹೋಹೊ ! ರುದ್ರು, ಅವನಜ್ಜಿ; ನಾನು ನನ್ನ ಕುಟುಂಬ ; ನೀನು, ನಿನ್ನ ಘೋಷಾ ಯಾತ್ರೆ. . . ಸಕಲೈಶ್ವರ್ಯಪುರಕ್ಕೆ ಬೆಳಗ್ಗೆ ನೀನೂ, ನಿನ್ನ್ ಕುಟುಂಬಾ, ಯಾಕೂಬಾ ; ನೀನು, ನಿಮ್ಮಜ್ಜಿ ರುದ್ರಾ ! ನಾನು ನನ್ನ್ ಕುಟುಂಬ, ಹಾಜರಾಗ್ಬೇಕು. ರೈಲ್ವೆ ಸ್ಟೇಷನ್ನಲ್ಲಿ. ಖರ್ಚು ನನ್ಭಾರ, ಹಾಜರಾಗೋದು ನಿಮ್ಮಿಬ್ಬರ ಭಾರ ! ಇಷ್ಟೊತ್ತ್ಗೆ. . . ಯಶ್ವಂತ್‌ಪುರ ದಾಟಿರತ್ತೆ, ಕಪ್ಪಣ್ಣ ಮಹಾತ್ಮ.

ಯಾಕೂಬ್ : (ತಾತ್ಸಾರದಿಂದ ನಗುತ್ತ) ಕ್ಯಾ ಸಾಮಿ ? ಕ್ಯಾ ಸಾಮಿ ? ಕಂಟೋನ್‌ಮೆಂಟ್ ಚ್ಹೋಡ್ಕೆ. . . ಕಂಸೆಕಂ . . . ಕಿಷ್ಣಾಜ್‌ಪೇಟ್ . . .

ಧೋಂಡೂ : ಏನೊ ಯಾಕೂಬಾ ? ಯಶವಂತಪುರ ದೊಡ್ಡಬೇಲಿ ತುಂಕೂರು ಅರಸೀಕೆರೆ ಹಾಸನ ಹೋಗೋ ರೈಲ್ನ ದಂಡಿನಕಡೆ ತಿರ್‍ಗಿಸ್ಬ್ಯಲ್ಲೋ ?

ಯಾಕೂಬ್ : (Smiling equally intensely) ಕ್ಯಾ ಸಾಮಿ ? ಕಂಟೋನ್‌ಮೆಂಟ್, ಬೋರಿಂಗ್‌ಪೇಟೆ, ಜೋಲಾರ್‌ಪೇಟೆ, ವಾಣಿಯಂಬಾಡಿ ಹಮಾರ ಲೋಗೊ ಹೈ ವಹಾ–ಮೇರಾ ಸಾಲಾ ಸುವರ್, ಓಹ್ಯೆ ಅಲಾದಾ ಕಾಮ್ ಕರ್ಕೆ . . . ಮದರಾಸ್ ಜಾನೇಕ ಗಾಡೀಮೇ ಹಮಾರ ಕಪ್ಪಣ್ಣಾ ಸಾಬ್ ಚಡೇಸೊ, ಮದರಾಸ್ ರೈಲ್ಕೊ ತುಂಕೂರ್ ಪೂನಾ ತರಫ್ ಫೀರಾತೀನಾ ? . . . ಏನು, ಸಾಮಿ . . ಮಷ್ಕಿ ಇದ್ದಾದೆ?

ಧೋಂಡೂ : (Aghast) ಹಾಗಾದ್ರೇನು, ಮದರಾಸ್ ರೈಲ್ ಹತ್ತಿಸ್ ಬಿಟ್ಯಾ ? ಹಾಸನಕ್ಕ್ ಹೋಗೋವರ್‍ನಾ ? (Takes Yakoob by the shoulders and shakes him like a rat) ಬಗ್ಗೋ ಬೇಕೂಫಾ !

ಯಾಕೂಬ್ : ಕ್ಯಾ ಸಾಮಿ ? ನಾನೇನು ಹತ್ತೀಸೋದು . . . ? ಸಾಬ್‌ಉತ್ರೆ– ಪೋರ್ಟ್ರು ಬೋಲೆ, ಬಿಚಾರಿ ಸಂದೂಕ್ ಲೇಗಯಾ . . . ಮುಝೋ ಬೋಲೆ ಹಾತ್‌ಮೇ ಒಂದಾಣೆ ಕೊಟ್ಟಿ "ಪಲಾಟ್‌ಫಾರಂ ಟಿಕೆಟ್ ತಕಂಡೀ ಸಾಮಾನ್ಕೆ ಸಾತ್ ಬಾ" ಕರ್ಕೆ. ವೈಸಾಚ್ ಕಿಯಾ ಮೈ. ಮದರಾಸ್ ರೈಲ್ ಛಡ್ಕೆ . . . "ಸೆಕಿಂಡ್‌ಕ್ಲಾಸ್" ಬೈಟ್ಕೆ . . . ಪೋರ್ಟ್ರು ಚಾರ್ ಆನಾ ದೇಕೆ . . . ಪಾಕಿಟ್‌ಸೆ ಪೈಸಾ ನಿಕಾಲ್ಕೆ . . (ವೇಸ್ಟ್‌ಕೋಟ್ ಜೋಬಿನಿಂದ ನೋಟುಗಳನ್ನು ತೆಗೆದು) ರುದ್ರೂ ! ಕೇಕ್ಡಿರೇ! ತುಜ್ಪೆ ಏಕ್ ರುಪಾಯ್ (ರುದ್ರೂಗೊಂದು ರುಪಾಯಿ ಕೊಟ್ಟು, ರುದ್ರುವು "ನಾನೇಳ್ಳಿಲ್ವಾ ! ಚಿನ್ದನ್ತಾ ದಣಿ" ಎನ್ನುತ್ತಿರುವಲ್ಲಿ) ಮುಝೋ ದೋ ರುಪಾಯ್ ದಿಯ ! ಆಪ್‌ಕು ! . . . . ಅರ್‍ರೆ ! ರ್‍ರೆ ! ರ್‍ರೇ! ರ್‍ರೆ ಯಾಖೂಬಾ !. . . ಬೇವಖೂಫಾ ಭೂಲ್ ಗಯಾನಾ ಮೈ!. . . ನಿಮ್ಗೂನ್ದ್ಗೆ–ಸಾಮಿ! ಏಕ್ ಖತ್ ಖಬರ್ . . . ಕಾಲಾಭಾಯ್ ಸಾಮಿ ದಿಯೇಸೋ–ಕಾಗಸ್ ! [ಎನ್ನುತ್ತಾ ಕಿಸೆಯಿಂದ ಒಂದು ಲಕೋಟೆಯನ್ನು ಹೊರತೆಗೆದು, ದಿಗ್ದೇಶ ಭ್ರಮಿತನಾದ ಧೋಂಡೂವಿನ ದಕ್ಷಿಣ ಹಸ್ತದಲ್ಲಿ ಇಡುವನು.]

ಧೋಂಡೂ : (ಹಸನ್ಮುಖನಾಗಿ ಲಕೋಟೆಯನ್ನು ಒಡೆದು ಒಳಗಿನ ಪತ್ರವನ್ನು ಹೊರತೆಗೆದು ಕಾಗದದ ಮಡಿಕೆಗಳನ್ನು ಬಿಡಿಸಿ, ಕಾಗದವನ್ನು ವಿಸ್ತರಿಸಿ, ನಗುತ್ತಾ) ಹಾಗಾದ್ರೆ, ಪೂನಾ ರೈಲ್‌ಬಿಟ್ಟು,

ಮದರಾಸ್ ರೈಲ್ ಹತ್ತಿದ. ಪ್ರೋಗ್ರಾಂ changeoo ! ಹ್ಯಾಗಿದ್ರೂನೂವೆ ನಾವೆಲ್ರೂ ನಾಳೆ ನಿಶಿ ಸಕಲೈಶ್ವರ್ಯಪುರ ಸೇರೊ . . . programme ತಪ್ಸೋಲ್ಲ ವಿವರ್ಸಿ ಇರ್ತಾರೇಂತ ಅಂಬೋದು ನ ನ್ನ ಭಿ ಪ್ರಾ ಯ ! (ಓದಲುಪಕ್ರಮಿಸಿ) . . . .

—ರೈಲ್ವೆ ಸ್ಟೇಷನ್

ನನ್ನ ಪ್ರಿಯತಮನಾದ ಧೋಂಡೂವಿಗೆ, ಕಪ್ಪಣ್ಣನ ಹೃದಯಪೂರ್ವಕವಾದ ವಿಜ್ಞಾಪನೆ.

ನಿನಗೂ ನನಗೂ ಪ್ರಿಯತಮವಾದ ವಸ್ತು ಒಂದು, ಕ್ಷಣಮಾತ್ರ ನಿನ್ನ ನನ್ನ ಅಕ್ಷಗಳಿಗೆ ಕಂಡ್ಬಂದು, ಆ ಕ್ಷಣವೆ ಅದೃಶ್ಯವಾದ, ರಂಢೋಲ್ ರಂಗಣ್ಣ . . ನನ್ನಗ್ರಜನ, ಪಂಚತ್ವವನ್ನು, ನಿನಗೆ ನಾನು, ನನ್ನ ಹೃದಯವು ಬೇಯುತಿರುವಲ್ಲಿ ಹ್ಯಾಗೆ ಹೇಳುವುದು ? . . .

"ಪಂಚಭಿರ್ ನಿರ್ಮಿತಂ ದೇಹಂ |
ಪಂಚತ್ವಂತು ಗತೇ ಸತಿ ||
ಸ್ವಾಂಸ್ವಾಂ ಯೋನಿಮನುಪ್ರಾಪ್ತಂ |
ತತ್ರಕಾ ಪರಿದೇವನಾ ||"

ಎಂಬಂತೆ ! ಧೋಂಡೂ ಪ್ರಪಂಚ ನಶ್ವರ ; ನಾನೂ, ನೀನೂ, ನಮ್ಮ ಅಣ್ಣಾ ರುದ್ರಾ, ಯೂಕೂಬೂ ಕೂಡ ನಶ್ವರ ! ನಮ್ಮಣ್ಣ ಈಗ ಬಂದ್ದಾಗಿದೆ. ಈಗ್ಲೇ ಹೋದ್ದಾಗಿದೆ. ಆದ್ರೂನೂವೆ ಅವನ ಸರ್ವಸ್ವವೂ ಪಂಚಭೂತಗಳ ಪಾಲಾದ್ರೂನೂವೇ, ಒಂದು ಹತ್ತು ನಿಮಿಷ ಭುವಂಗತ ದಿವಂಗತನಾದ ರಂಢೋಲ್ ರಂಗಣ್ಣನ ಮೇಲೆ ನನಗಿದ್ದ ಪ್ರೇಮವನ್ನು ನಿನಗೆ ಆತನ ಮೇಲಿದ್ದ ಪ್ರೇಮವನ್ನೂ ಅರಿತೂ, ನಿನ್ನ ಪ್ರೇಮಿ, ಖಯಾಲಿ ಕಪ್ಪು, ಆತನು ಸತ್ತಗಲಾಟೆಯಲ್ಲಿ ತನ್ನ ತಮ್ಮನ ಅನುಕೂಲಕ್ಕಾಗಿಯೇ ಮಡಿದ ನಮ್ಮಣ್ಣನ ಶ್ಮಶ್ರುವನ್ನು ನಿನಗೆ ಜ್ಞಾಪಕಾರ್ಥವಾಗಿ ಈ ಸಂದೇಶವನ್ನು ಒಳಗೊಂಡಿರುವ ಲಕೋಟೆಯಲ್ಲಿ ಇಟ್ಟಿರುವೆನು ! ಮುಖ್ಯ . . .

ಬದುಕು ನಿಮಿತ್ತಂ ಬಹುವಿಧ ಮೋಸಃ ||

ಅರ್ಥಾ ಮಾಡ್ಕೊ !

ಇತಿ

ಖಯಾಲಿ ಕಪ್ಪಣ್ಣ.

[ಏತತ್ ಪತ್ರವನ್ನು ಉತ್ಸಾಹದಿಂದ ಓದುತ್ತಾ, ಓದುತ್ತಾ, ಧೋಂಡೂವಿನ ಮುಖವು, ಮಧ್ಯಾಹ್ನ ದೇದೀಪ್ಯವಾಗಿ ಬೆಳಗುತ್ತಾ ಪಶ್ಚಿಮಾದ್ರಿಯನ್ನು ಕ್ರಮಕ್ರಮೇಣ ಸಮೀಪಿಸುತ್ತಾ, ಸಮೀಪಿಸುತ್ತಾ,

ತದೇವ ಕ್ರಮೇಣ, ಮಟಮಟ ಮಧ್ಯಾಹ್ನದಲ್ಲಿ ಬೀರಿ ಬೂದಿ ಮಾಡುತ್ತಿದ್ದ ರಶ್ಮಿಗಳು ಪೂರ್ವೋಕ್ತ ಕ್ರಮಕ್ರಮೇಣ ಸುಸ್ತು ಸುಸ್ತಾಗಿ ಪಶ್ಚಿಮಾದ್ರಿ ಸಮೀಪಿಸುತ್ತಲೇ ತಾನೇ ಬಾಡಿ, ಬೆಂದು, ಕುಗ್ಗಿ ಕಣ್ಮರೆಯಾಗುವಂತೆ, ಧೋಂಡುವು ಕಪ್ಪಣ್ಣನ ಪತ್ರವನ್ನು ಆದಿಯಿಂದ ಅಂತ್ಯದವರೆಗೂ ಪಠಿಸುತ್ತಿರುವಾಗ್ಗೆ ಆತನ ವದನ ಕಮಲವು ಸೂರ್ಯ ನಾರಾಯಣನ ಪ್ರಭಾತ ಉದ್ಭವಿಸಿ ಸಾಯಂ ಸಂಧ್ಯಾ ಅಸ್ತಮಿಸುವ ಪ್ರತ್ಯಹಸ್ಸಂಪ್ರದಾಯವನ್ನು ಸೂಚಿಸುತ್ತಾ ಇರಲು ಓದಿ ಮುಗಿಸಿ]

ಧೋಂಡೂ : ಶ್ಮಶ್ರು ?... ಶ್ಮಶ್ರು?... ಶ್ಮಶ್ರು?... ಶ್ಮಶ್ರು ?. . . ಅನ್ದ್ರೇನು ?

ಯಾಕೂಬ್ : ಆರ್‍ರೆ ರ್‍ರೆ ರ್‍ರೆ ರ್‍ರೆ ರ್‍ರೆ ರ್‍ರೆ! ಸಾಮೀ... ಏತೊ ನಾಟಕ್ ವಾಲೋಂ ಲಗಾನೇಕಾ ಮಷ್ಟೂಂ !

ಧೋಂಡೂ : ನಾಟ್ಕಾ !? . . . ಮೀಶೇ !? . . .

[ಕೂತಿದ್ದ ಹಂಡೆಯ ನಿತಂಬದಿಂದ ಜಾರಿಬಿದ್ದು ಮೂರ್ಛಿತನಾಗುತ್ತಾ]

ಫಾಳೀ ! . . . ಫಾಳೀ !! . . . ಫಾಳೀ !!

[ಯಾಕೂಬನು ಧೋಂಡೂವಿನ ಮುಖದ ಮೇಲೆ ತನ್ನ ಬಾಯಿಂದ ಉಚ್ಛ್ವಾಸಿಸಲು]

ತುಂಡ್ಹಾಕೋ ತುರುಕ ? ನಿನ್ನ ಬಾಯ್ನ ಹಾಳು ಫಾಳಿ ಅಲ್ಲ ! ಫಾಳೀ. . . ದೇವರ ಫಾಳೀ !!

ಯಾಕೂಬ್ : ಸಮಜ್‌ಲಿಯಾ ಸಾಮಿ ! (ಕೆಂಪು ಕುಲಾವಿಗೆ ತಗಲಿಸಿರುವ ಕರೀ ಕುಚ್ಚನ್ನು ಬೆರಳುಗಳಿಗೆ ಬಟವಾಡೆ ಮಾಡಿ, ಜೀಸಣಿಗೆಯಂತೆ ಬೀಸುತ್ತಾ) ಸುಧಾರ್ಲೊ ! ಸಾಮಿ, ಸುಧಾರ್ಲೊ !

ಧೋಂಡೂ : ನೀರು ! ನೀರು . . . (ಯಾಕೂಬನ್ನು ತನ್ನ ಬಾಯನೀರನ್ನು ಬಿಡಲುದ್ಯುಕ್ತನಾಗಲು) ದಮ್ಮಯ್ಯ ನಿನ್ನ ಬಾಯಿ ನೀರಲ್ಲ. . . ದಮ್ಮಯ್ಯಾ ಉಗೀಬೇಡ !. . . ರುದ್ರಾ... ನೀರು ! . . . ನೀರೂ!!!

ರುದ್ರೂ : (ಕೋಣೆಯಲ್ಲಿ ಇರುವ ಒಂದೊಂದು ಪಾತ್ರೆಗಳಲ್ಲೂ ತಂಬಿಗೆಯೊಂದನ್ನು ಕುಕ್ಕಿ ಕುಕ್ಕಿ "ಢಂಗ್ ಢಂಗ್" ಶಬ್ದಗಳೊಂದಿಗೆ) ಪಾತ್ರೆಗ್ಳೆಲ್ಲಾ. . . ಖಾಲಿ . . . ಮಾಸ್ವಾಮಿ !

ಧೋಂಡೂ : ನೀರೇ ಇಲ್ಲವೇನೋ ?! ಅಯ್ಯೋ ಪಾಪೀ ! ನೀರಿಲ್ಲೇದೇವೇ ನೀರು ಕುಡಿಸ್ತಿಧಾನಲ್ಲೋ ? ಹಯ್ಯಯ್ಯೋ !

[ಫರದೆಯು ನಿಧಾನವಾಗಿ ಜಾರುವುದು]

ನಮ್ಕಳಬ್ಬು

ಪಾತ್ರಗಳು

ಅಶ್ವತ್ಥ
ರಂಗಣ್ಣ
ಸಂಪತ್
ಬದರಿ
ಸುಬ್ಬಣ್ಣ : Memberಗ್ಳು
ವೆಂಕಟೇಶ
ಅಹೋಬ್ಳು
ಶೇಷು
ಪಿಲ್ಲೂರಾವ್
ಶಾಸ್ತ್ರಿ

ಸ್ಥಾನ : ಬಳ್ಳಾಪುರದ ರಾಜಬೀದಿ

ಕಾಲ, ಭಾಷೆ : ಆಧುನಿಕ

ಪ್ರಥಮ ರಂಗ

ರಂಗಣ್ಣ: Good God! Aswath !

ಅಶ್ವತ್ಥ: ಯಾಕೆ ರಂಗೂ ? God ಯಾಕೆ ಈಗ ?

ರಂಗಣ್ಣ: ಅಲ್ಲ Aswath ! Convocationನಲ್ಲಿ ನೋಡಿದ್ದು ನಿನ್ನ. ನೋಡಿದ್ದು ಅಂದರೆ ಏನು ಬರಿ B.A., ನಾನು ; ಡಿಗ್ರೀಗೆ ಅಂದುಕೊಂಡಿದ್ದೆ ; ನೀನೋ M.Sc., Goldmedalಉ. ನನ್ನ ಹಣೇಬರಹ B.A., LL.B.ನೋ clerkshipಓ according to father-in-law's fiscal policy. But Aswath, (ಅಶ್ವತ್ಥನನ್ನು ತಬ್ಬಿಕೊಳ್ಳುತ್ತಾ) Room matesಉ ನಾವು . . . . . .father . . . father-in-law. . . ಇಬ್ರೂ disappoint ಮಾಡಿದಾಗ ನಿನ್ನ elocution prize forty rupees ನನ್ಕೈಲಿಟ್ಟೆಲ್ಲಾ ! , . . ಅದೇನು obligationಏ ! loanಏ !. . . you disappeared suddenly ! ನಾನ್ ತಿಳ್ಕೊಂಡೇ Tata Institute, Bombay, Research workಉ ಈ lineನಲ್ಲಿ perhaps foreignಉ ಹೀಗೆಲ್ಲಾ ತಿಳ್ಕೊಂಡಿದ್ರೆ . . . Here you are in benighted Bullapur ! . . . Scantily dressed ! Do you know Aswath ? ನಿನ್ನ arrest ಮಾಡಿಸ್ಬಲ್ಲೆ under the Vagrancy Act? ಅಲ್ಲಾ Aswath . . . ನಿನ್ನ brainಉ, ನಿನ್ನ peopleಉ ಇಷ್ಟೆಲ್ಲ backing ಇಟ್ಕೊಂಡಿರೋ ನೀನು . . . How long?. . . I mean ಎಷ್ಟು ದಿವಸ, ಈ ಊರ್ಗೆ ಬಂದು ?

ಅಶ್ವತ್ಥ: ಹೌದು Rangu ! growing grey at 38 ! Bad signಉ, ಮಗು. One of my juniorಉ (ಫಕಫಕನೆ ನಗುವನು). I used my . . . what you call gold-medal brainoo and ನಾನ್ collegeನಲ್ಕ್ಕಲ್ತ science in business and agriculture.

ರಂಗಣ್ಣ : Aswathoo, Roadನಲ್ಲಿ celebrate ಮಾಡೋದೆ, old friend's meetingoo ? best placeಉ ನಮ್ಕ್ಳಬ್ಬು, for our talkoo. . . ಅಲ್ಲಿಗೆ ಹೋಗೋಣ !

you must be a member of our cluboo! Businessoo, agricultureoo, ಅಂದೆಯಲ್ಲಾ. . . therefore ನಿನಗೆ more permanent locus standi than usಉ, birds of passageoo . . . in public serviceoo. ಈವತ್ತು ಈ ಡಿಸ್ಟ್ರಿಕ್ಟೂ, ನಾಳೆ ಆ ಡಿಸ್ಟ್ರಿಕ್ಟೂ. Never never know where you are in public serviceoo only thing permanentoo . . . . pensionಉ plus insuranceಉ. ನಮ್ಮ clubಗೆ ಹೋಗೋಣ.

ಅಶ್ವತ್ಥ : ಕ್ಷಮ್ಸು dear boy. Watch ಮಾಡ್ತಾಲೆ ಇಧೇನೆ ನಿಮ್ಮ ಕ್ಳಬ್ನ. Lawyerಈಗ್ಳು, doctorಉಗ್ಳು, engineerಗ್ಳು, etcetera plus of course your lone lone selfಉ judge you know?. . . in a manner of speaking in the club and yet out of it !!!. . . poor Rangoo ನೀನೋ ನಿಮ್ಕ್ಳಬ್ಬೋ !

ರಂಗಣ್ಣ : ಅಲ್ಲಾ Aswathoo ನಿನ್ಗೆ club lifeಏ ಗೊತ್ತಿಲ್ಲಾ. ಯಾವಾಗ್ಲೂ collegeನಲ್ಲಿ hostelನಲ್ಲಿ lone wolfoo ನೀನು . . . clubಗೆ ಬಾ, club lifeಉ ಅಂದ್ರೆ you are thinking that lawyersಉಗ್ಳು doctorಉಗ್ಳು engineerಗ್ಳು etcetera will go on talking “Shopoo” ಅಂತ ತಿಳ್ಕೊಂಡಿಧೀಯಾ ? we officersoo and professional menoo in our respective professions ದನದ್ಹಾಗೆ day ಎಲ್ಲಾ ದುಡ್ಡೂ ದುಡ್ಡೂ ದಣ್ಣೂ ದಣ್ಣೂ. . . ಮನೇಗ್ಬಂದ್ರೋ ! Saaame bungalow saaame gateoo saaame portico . . . . saaame wifeoo, saaame ಕಿರ್ಲಿಂಗ್ ಮಕ್ಳು. Six o’clock to sleeping ten o’clock ಹ್ಯಾಗೆ spend ಮಾಡೋದು timeನ? Of course ಬಂಗ್ಲೆ ಬೇಕು. servants ಬೇಕು, wife ಬೇಕು, childrenoo ಬೇಕು. But “possession is nine points of ಪಾಲ್ಮಾರಿಕೆ” ! The price of success in service is “ಬೇಜಾರು”! Therfore, club ಇರೋದು, to forget our pensionಉ . . . ಸಂಬ್ಳಾಸೂ and positionsಊ for two hours in the day. Come on dear boy!! . . . [A Car arrives. Ranganna and Aswath get in and the car drives off.]

ದ್ವಿತೀಯ ರಂಗ

[The Reading room of the Multipolitan Club. Members scattered haphazard round a table heavily laden with journals and magazines.]

ಸಂಪತ್ : ಏನ್ ಶಾಸ್ತ್ರಿ, ಮೇಲ್ paperಏ ಇಲ್ಲಾ ?

ಶಾಸ್ತ್ರಿ : ಏನ್ ಹೇಳ್ಲಿ ಸಾರ್. Pilloo ರಾಯ್ರು, Head Masteroo. . . ಬೆಳಗ್ಗೆ ತೆಗೊಂಡ್ಹೋದೋವ್ರು. . .

ಸಂಪತ್ : ಯಾರಿಗೆ ಹೆಡ್ ? ಯಾರಿಗ್ಮಾಸ್ಟ್ರು ? ನನಗೋ ? ನಿನಗೋ ? ಇಂಗ್ಬಾರ್ ಬದ್ರಿ ? Head masterಉ ಆನಾಕಾಲ್ಲೇ . . . ಅವಂಡೆ ಸ್ಕೂಲ್ಕ್ಹೋಡ್ಡು. . . ಅವಂಡೆ ಬಡ್ಡಿ ಫಸಲ್‌ಕಿ ಮಾಸ್ಟರು ! . . . . ಉಣ್ಡೆ ಎಣ್ಡೆ ಹೆಡ್ಡಾ. . . ಉಣ್ಡೆ ಎಣ್ಡೆ ಮಾಸ್ಟ್ರಾ . . . ಏನ್ ಸುಬ್ಬೋ ? ಏನ್ ವೆಂಕಟೇಶ್ ?. . . .Good God, ನಾನ್ ಮೊದ್ಲೇ ಹೇಳ್ದೆ ! Nongazetted mennoo, ನಮ್ಮ clubಗೆ . . . . ಬೇಡ ಅಂತ.

ಹಿರಿಯಣ್ಣಯ್ಯ : Gentlemen ! Stopit ! This is a club !. . . Officials or non-officials, gazetted or non-gazetted . . . I mean . . . ಕ್ಷಮ್ಸಿ ! But (ಫಕ್ಕನೆ ನಕ್ಕು). . . you know what I mean?

All the rest at the table : Quite so, sir !

ಬದರಿ : (rising) But still sir... last month's Strand Magazine. . . ten days ಇಟ್ಕೊಂಡೂ . . . ಯಾಕೇಂತ explanation ಕೇಳಿದ್ರೆ "ಹಾರ್ಮೋನಿಯಂ cut of orderoo; ಅದ್ನ ರೀಪೇರಿ ಮಾಡ್ಕೊಂಡು, ಆಮೇಲೆ magazine ಓದ್ದೇ, therefore ತಡ,

delay . . . ಕ್ಷಮಿಸಬೇಕು– apologies” ಅಂತಂದವ್ರು. . . ಬೆಳಿಗ್ಗೆ ಬಂದ ಮೇಲ್ paperಉ ಮನೆಗೆ ತೊಗೊಂಡ್ಹೋಗಿ . . . Still he has got it, sir! As common members, up to date with subscriptions. . . (ಶಾಸ್ತ್ರಿ ಕಡೆ ತಿರುಗುತ್ತಾ) ಏನ್ ಶಾಸ್ತ್ರೀ ?

ಶಾಸ್ತ್ರಿ : ತಾವುಗಳೆಲ್ಲ up-to-dateಉ ಸಾರ್ subscriptionನಲ್ಲಿ ! . . . ಆತ up ಏನೂ? To ಏನೂ? date ಏನೂ? ಒಟ್ನಲ್ಲಿ sirs, ಕಮಿಟಿ ಮೆಂಬರು, ಇನ್ನೇನು ಹೇಳ್ಲಿ ?

ವೆಂಕಟೇಶ್ : ಹೇಳೋದೇನು ? ಕೇಳಿ? Mail paper ಏಕೆ ಇನ್ನೂ ಬರಲಿಲ್ಲಾಂತ.

ಶಾಸ್ತ್ರಿ : (approaching Hiriyanniah) ಕ್ಷಮ್ಸಿ. ಸನ್ನಿಧಾನದಲ್ಲಿ ಅರಿಕೆ ಮಾಡ್ತೇನೆ. ಬಡವ, ಎಂಟು ರೂಪಾಯಿ ಸಂಬ್ಳ, ಒಂದು Tuition ಇಟ್ಕೊಂಡಿಧೇನೆ; ಸಂಸ್ಕೃತ; ಐದು ರೂಪಾಯಿ. ಹದಿಮೂರು! ಎರಡು ರೂಪಾಯಿ promotion incrementಗೆ application ಹಾಕಿಧೇನೆ committeeಗೆ . . . ಆತ committee ಮೆಂಬರು ಪ್ರಾಮುಖ್ಯ ಮೆಂಬರು . . . ನನ್ನ ಅನಿವಾರ್ಯಗಳ್ನ ಸನ್ನಿಧಾನ . . . ಮನಸ್ಸಿಗೆ ಇಂಗಿತ ಮಾಡ್ಕೊಂಡು . . . ಈಗ ಆತನ್ನ. . . ಈ paper ವಿಷಯದಲ್ಲಿ ಪ್ರಶ್ನಿಸಿದ್ನೋ . . . ?

ಸುಬ್ಬು : It’s all right, ಶಾಸ್ತ್ರಿ ! We will manage him.

ಹಿರಿಯಣ್ಣಯ್ಯ : I doubt it.

[Enter ಪಿಲ್ಲೂರಾವ್. ಶಾಸ್ತ್ರಿ abjectly approaches him and whispers]

ಶಾಸ್ತ್ರಿ : ಸ್ವಾಮಿ . . . . ದೊಡ್ಸಾಹೇಬ್ರು, ಚಿಕ್ಸಾಹೇಬ್ರು, engineer ಸಾಹೇಬ್ರು. doctor ಸಾಹೇಬ್ರು ಒಟ್ನಲ್ಲಿ ಸಾಹೇಬ್ರುಗಳ್ಗೆಲ್ಲಾ ಈ ಹೊತ್ತೇ ತಾವು ಒಯ್ದ Mailpaper ಮೇಲೆ ವ್ಯಾಮೋಹ ಹುಟ್ಟಿದೆ. ದಯವಿಟ್ಟು, ನನ್ನವಸ್ಥೆ ಮರೀದೆ . . . ಅವ್ರ ಅವಸ್ಥೇನ . . . ಹೇಗಾದ್ರೂ ಸ್ವಾಮಿ, ತಮಗೇನು ಬುದ್ಧಿ ಕಡಿಮೆಯೇ . . . ಸಾಹೇಬ್ರು ನೀವಾಗಬೇಕಾಗಿತ್ತು ! ಆಗದ್ದು ನನ್ನ ಪಾಪ ! ಆದ್ರೂ ನಿಮ್ಮ High

School ! ಹುಡುಗ್ರ ಪುಣ್ಯ ! ದೊಡ್ಡ ಸಾಹೇಬ್ರಿಂದ D.S.P ಸಾಹೇಬ್ರವರೆಗೂ ಹೊಂಚು ಕಾದಿದೆ– ಈ ಕೇವಲ English Mail paper ನೆಪ ಇಟ್ಕೊಂಡು ತಮ್ಮನ್ನ ಮುತ್ತಿ ಮುಳುಗಿಸೋಕೆ.

ಪಿಲ್ಲೂರಾವ್ : (In a loud whisper) ಶಾಸ್ತ್ರಿ ನಿನ್ನ two rupees increment ಖಾತ್ರಿ, ಎಂಟು ಘಂಟೆಗೆಲ್ಲಾ ಹೊರಟು ಹೋಗ್ತೇವಲ್ಲ! ಒಂದು petromaxಗೆ ಒಂದೊಂದು ರಾತ್ರಿಗೆ ಒಂದೊಂದು bottle kerosene oil ಖರ್ಚು ಇರಬಹುದು. ಆದ್ರೆ ನಮ್ಮನೇಲಿ. . . ಯಪ್ಪತ್ತೈದು ರೂಪಾಯಿ ಸಂಬ್ಳ. . . ಹತ್ತು ರೂಪಾಯಿ allowanceಉ . . . ದೀಪ ?

ಶಾಸ್ತ್ರಿ : ಅದು ಚಿಲ್ರೆ ಬಾಬ್ತು. ಆ ವಿಧದಲ್ಲಿ ನಾಳೆಯಿಂದ ! . . . ಎಲ್ಲಾ ತಿಳಿದ ನೀವು ಮುಂದಕ್ಕೆ ಅರ್ಥಮಾಡಿಕೊಳ್ಳಿ ! ... ಏರ್ಪಾಡು ಆಗುತ್ತೆ !! . . .

ಪಿಲ್ಲೂರಾವ್ : Thank you, Sastry ! (Loudly) Mail paper ಕೇಳ್ತೀಯಾ ಶಾಸ್ತ್ರಿ ? Let me explain : ದೊಡ್ಡ ಮನುಷ್ಯ ಒಬ್ಬ jailಗೆ ಹೋಗ್ತಾನೆ, for what he thinks is the Country's cause. ನಾನ್ನೋಡ್ದೆ ! ಮಿಕ್ಕ prisoners ಜೊತೇಗೆ ಇವ್ರು jailಗೆ ಹೋಗೋ processionನಲ್ಲಿ. . . "left-right, left-right". . . . ಶಂಕರಾಭರಣ, ಒಂದು English note ಹಾಗೆ.

ಸಗ್ಗಾ, ಸಗ್ಗಾ, ಸಗ್ಗಾ, ಮಗರಿಸ |
ನಿರ್‍ರೀ, ನಿರ್‍ರೀ, ನಿರ್‍ರೀ, ಗರಿಸನಿ |
ಸಗ್ಗಾ, ಸಗ್ಗಾ, ಸರಿಗಮಪಾ |
ಧಪಮಗ ಪಮಗರಿ, ಸಸ್ಸಸ್ಸಾ !

ಅಂತಾ ಹೊಡೆದ್ಬಿಡೋಣಾಂತ ನೋಡ್ದೆ. ಅವನ ದೊಡ್ಡ ಮನುಷ್ಯಕೇಗೆ ಸರಿಯಾಗಿ ! But then Sastry, ಎಷ್ಟು ದೊಡ್ಡ ಮನುಷ್ಯನಾದ್ರೂ JAILಗೆ ಹೋಗ್ತಾನೆ. Therefore dignityನೂ ಇರ್ಬೇಕು. . . ಕೇದಾರ etc. hopelessoo ! Jailoo !. . . ನೀಲಾಂಬರಿ ಮುಖಾರಿ ಅದೂ ಆಗ್ದು Therefore dignity plus depression ಎರಡೂ ಇರೋಹಾಗೆ ಹುಸೇನಿ. ಮಂಜರಿ

ಹೀಗೆ ಯಾವುದಾದರೂ ರಾಗ ಚುನಾಯಿಸ್ಕೊಂಡು ಓದಿಬಿಟ್ಟು ನಾಳೆ ತಿರುಗಿ ತೊಗೊಂಡು ಬರೋಣಾಂತ Mail paperನ ಮನೇಲೇ ಬಿಟ್ಟಿಟ್ಬಂದೆ.

ವೆಂಕಟೇಶ, ಸಂಪತ್, ಬದರಿ, ಸುಬ್ಬಣ್ಣ : (Suddenly Shooting up in one indignant voice) ಏನ್ರೀ ಇದೂ, Head masterರ್ರೆ !–ನಮಗೆ headಏ ನೀವು, ನಮ್ಗೆ masterಏ ? Public Reading roomಉ !. . . private subscriptionsಉ . . . paper ಭೋಗಕ್ಕೆ ತಗೊಂಡ್ರಾ ಇಲ್ಲಾ ಭೋಗ್ಯಕ್ಕೋ ? . . . ನಿಮ್ಮುಖಾರೀಗೂ, Mail paperಗೂ ಏನ್ರೀ ಸಂಬಂಧ ? . . . ನೀಲಾಂಬರಿ ಎಲ್ಲಿ News paper ಎಲ್ಲಿ ?. . . are you mad . . . or are we all mad ! ?

ಹಿರಿಯಣ್ಣಯ್ಯ : Don’t include me gentlemen. In your intriguing Mise-en-Scene!

ಪಿಲ್ಲೂರಾವ್ : Forgive me sir! ತಮ್ಮ uprightness, probity, rectitudeಊ, Veracity, Willingnessಉ world knownಊ. ತಾವು meticulously, succinctly, punctiliously striving to uphold the motto of our beloved sovereignಊ needless to remind gazetted officersಉ . . . “ಸತ್ಯಮೇವೋದ್ಧರಾಮ್ಯಹಂ”. . . Humble ನನ್ನ motto–“Get what you getಉ and while you get itಊ, make the most of itಊ !” But “ಅಹಿಂಸಾ ಪರಮೋ ಧರ್ಮಃ” : which is the same as ಸತ್ಯಾನ್ನ ಪರೋ ಧರ್ಮಃ ; ಒಂದೊಂದು ಬಾರಿ difficult to reconcileಉ. ಸುಳ್ಳು ಹೇಳ್ಬಾರ್ದು, ಹಿಂಸೇನು ಮಾಡ್ಬಾರ್ದು. ನಮ್ಮ High School ಸಂಸ್ಕೃತ ಪಂಡಿತ್, ಹುಡುಗರಿಗೆ ಹೇಳುತ್ತಿದ್ದಾಗ, ಕೊನೇಲಿ ನಾನು ಈ English burdened ಭಾರತದ ಒಂದು lineಉ ಪೋಣಿಸ್ದೆ !
ಆತ ಹೇಳ್ಕೊಡ್ತಿದ್ದದ್ದು :

“ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್

ನಬ್ರೂಯಾತ್ ಸತ್ಯಮಪ್ರಿಯಂ

ಪ್ರಿಯ್ಯಂಚ ನಾऽನ್ಮ(ನೃ)ತಂ ಬ್ರೂಯಾತ್ ಅಂತ.

ನಂದು Or ‘ware o’ th’ world’s opprobrium !

But coming down to practical factsಉ gentlemen, officers but fellow members of up-to-date or out-of-date in subscriptionsಉ. I ask you a question ! Subscription ಕೊಟ್ಟೊ ಓದುತ್ತೀರಲ್ಲ papersಉ magazinesಉ! ; ಮನಸ್ಸಿನಲ್ಲಿ memoryಲಿ ನಿಲ್ಲಬೇಕಾದ್ರೆ, music ಇಲ್ದೆ ಹೇಗೆ manage ಮಾಡ್ತೀರಾ? ಗಮಕಿಗಳು ಸಂಗೀತವಿಲ್ದೆ ಮಹಾಭಾರತ ಬೊಗಳ್ಲಿ ನೋಡೋಣಾ ! ಕಂತೆ ಇಲ್ದೆ. . . ಪುರಾಣಗಳ್ನ ಕಿರ್ಲಿ ! ಆಗೋದಿಲ್ಲ gentlemen ! Music. . . . ಇದ್ರೆ memorize ಆಗುತ್ತೆ ! ಅಮರ music ಇಲ್ದೆ memorize ಹೇಗೆ ಸಾರ್ ಆಗುತ್ತೆ ? metreಉ ಛಂದಸ್ಸು etc ...? ನೋಡಿ...!

ಲೊ ಟಾ ಟಾ ಲೋ ಟ ಟಾ ಟಾ ಟ !

ಲ ಂ ಟ ಟಾ ಲ ಟ ಟಾ ಟ ಟಾ !

ಇದು boysಉ boyhoodನಲ್ಲಿ ಬಡಕೊಂಡ್ರೆ. . . ಎಂಭತ್ತು ವಯಸ್ಸಾದ್ರೂ, deathbedನಲ್ಲಿ din . . . ಆಗ್ತಿರುತ್ತೆ ... ಲಂಟಟಾ ಲಂಟಟಾ ಟಾಟ ! ಲಂಟಟಾ ಲಟಟಾ ಟಟಾ ! ಅಂತ.

paperನಲ್ಲಿ ಬಂದ್ದಾಬ್ಬುಗಳ್ನೆಲ್ಲಾ ಓದೋದು ಜ್ಞಾಪಕ ಇಟ್ಕೋಬೇಕು ಅಂದ್ರೆ musicಏ, first and last resourceಉ. Artoo develop’doo; up-to-date politicsoo, Social lifeಊ, ಸರ್ವಾನೂ kept in touchoo! I shall give you a practical demonstrationಉ because, I teachಉ just what I practiseoo, meaning, I practiseoo just what I preachoo ! ಶಾಸ್ತ್ರಿ ! ಹಳೇ paper ಯಾವುದಾದ್ರೂ ತೆಗಿ !!

[Sastry hands over an old newspaper]

ಪಿಲ್ಲೂರಾವ್ : Old paperoo, and of last waroo, delusion of old peaceoo, resultoo—deluge of present waroo. . .: (ಪೇಪರಿನಿಂದ ಓದುತ್ತ) [Newspaper– A poor unknown warrior dying in far away France shedding his blood for his king and his country was buried in

Westminister Abbey . . . . .A His Most Gracious Majesty the king Emperor with Her most Gracious Majesty the Queen Empress with His Royal Highness the Prince of Wales, were the chief mourners. . . . . B The British army was there. The Fusiliers were there. The Gold stream guards were there, The house guards were there. . . Indian Army . . . the black guards were there . . . . C Declaration of peaceoo . . . ! We, delegates and representatives of all nations in meeting assembled declare Universal Peace . . . the basis of all religionsಊ . . . universal Loveಊ . . . ಲಾವ್ವೂ. . . . ಲವ್ವೂ.......... D
[ಮೊದಲು ಸಾಧಾರಣವಾಗಿ ಮೇಲ್ಕಂಡ A.B.C.D. ಭಾಗಗಳನ್ನು ಓದುವನು.]
ಪಿಲ್ಲೂರಾವ್ : ಈಗೇನ್ ಅರ್ಥವಾದ್ದಾಗಾಯ್ತು . . . ಎಷ್ಟೊತ್ತಿರುತ್ತೆ ತಲೇಲಿ? ತಿರುಗಿ ಬನ್ನಿ. ಸಂಗೀತ ಹಾಕಿ sing ಮಾಡ್ತೇನೆ !! [ಮೇಲ್ಕಂಡ Aನ್ನು ನೀಲಾಂಬರಿಯಲ್ಲೂ, Bನ್ನು ಕೇದಾರದಲ್ಲೂ, Cನ್ನು ಅಠಾಣದಲ್ಲೂ, Dನ್ನು ಸುರುಟಿಯಲ್ಲೂ ಪಾಡುತ್ತಾ ಕೊನೆಯ ಲವ್ವೂ ಲವ್ವೂ ... ಎಂಬ ಪದಾರ್ಥದ ಆವೇಶದಲ್ಲಿ clubನಲ್ಲೆಲ್ಲಾ ಕುಳ್ಳನಾದ memberನ ಆಲಂಗಿಸಿ ಆತನ ಫಾಲಪಟ್ಟವನ್ನು ಚುಂಬಿಸುವನು.]

ಕುಳ್ಳ : ಏನ್ರೀ ಇದು ! Member Memberನ ಮುತ್ತಿಡೋದೂ !?

ಪಿಲ್ಲೂರಾವ್ : ಕ್ಷಮ್ಸಿ ! ರಸ !. . . ಯmotionsoo !

ಒಬ್ಬ ಮೆಂಬರು : ಏನ್ರಸ್ವೊ ! . . . ಎರಡು ಕೊಡ ಎಂಜಲು !. . . ಸಾರ್ . . . (to Hiriyanniah) ಏನ್ಸಾರ್ ನೀವೂ ಸುಮ್ನಿಧೀರ ! I will appeal to the committee !
[Hiriyanniah exits with handkerchief stuffed in his mouth. By door R. Pillu Rao approaching door. L. confronts Sastry and speaks Sotto-Voce.]

ಪಿಲ್ಲೂರಾವ್ : ಶಾಸ್ತ್ರಿ ! ನಿನಗೆ ಸಂಸ್ಕೃತ ಗೊತ್ತು ! ಇನ್ನು ಐದು ನಿಮಿಷ ಕೂಡಾ ಇಲ್ಲಾ. . . ಹತ್ತು ನಿಮಿಷ . . . perhaps ಅರ್ಧ ಘಂಟೆ petromax ಉರಿದೀತು. ಜಾತಾ ಬಾಕಿ . . . ಸಿಲ್ಕು . . . ಸೀಮೆಯೆಣ್ಣೆ.

ಮಯಾಪ್ಯರ್ಧಂ | ತ್ವಯಾಪ್ಯರ್ಧಂ

ಮಾವಿಘ್ನಂ | ಕುರುಶಾಸ್ತರೀ ||

ಅರ್ಥ್ವೇ?

ಶಾಸ್ತ್ರಿ : ಏನ್ಸಾರ್ ನೀವು ನೀವೇಯೇ ? ತಾವು ಈ ಊರ್ಗೆ ಬಂದ ತಕ್ಷಣದಿಂದ ತಹಲ್‌ವರೆಗೂ ನಮ್ಮ ನಮ್ಮಲ್ಲಿ. . . ತಮ್ಮ ನನ್ನಲ್ಲಿ. . . ಪರಸ್ಪರ ಪ್ರಕೃತಿ ಲಾಭಾರ್ಥದ ಅನುಕೂಲಾನ ಅರಿತ ನನ್ನ, “ಅರ್ಥವೇ ? ಶಾಸ್ತ್ರೀ!” ಅಂತೀರಲ್ಲಾ ! ಆಶ್ಚರ್ಯ ! ಸೀಮೆಯೆಣ್ಣೆ ಸಲ್ಲಿಸ್ತೇನೆ ! ನನ್ನ ಎರಡು ರೂಪಾಯಿ increment applicationಉ ! . . . ಒಟ್ನಲ್ಲಿ. . .committee meetingoo ನಾಳೆ ! . . . ನಾಲ್ಕುವರೆ ಘಂಟೆಗೆ ! ನಮ್ಮ ಅಪ್ಪ ಅಮ್ಮ. . . ಮುದಿ ಗೊಡ್ಡುಗ್ಳು. . . ನನ್ನ ಮಕ್ಳು. . . .ಇವರೆಲ್ರ ಜೀವಗ್ಳು ತಮ್ಮ ಕೈಲಿದೆ ಮರೀಬೇಡಿ. . . ನಾನೂ ಮರೆಯೋದಿಲ್ಲ. . . ಸೀಮೆಯೆಣ್ಣೆ ಸಲ್ಲಿಸೋದ್ನ. . . ದೊಡ್ಡ ಮನುಷ್ಯನೋ? . . . ಚಿಕ್ಕ ಮನುಷ್ನ್ಯೋ ! . . . ಜೈಲೋ ಬಂಗ್ಲೇನೋ ! ಮೇಲ್ paperನ ಕಳಿಸ್ಬಿಡಿ. ದಮ್ಮಯ್ಯಾ !

ಪಿಲ್ಲೂರಾವ್ : ಕ ಳಿ ಸೋ ದೇ ನು ! ಬಿಡೋದೇನು ? ಶಾಸ್ತ್ರೀ ! ನನ್ನ ದಬಾಯಿಸ್ದ ಈ ದೊಡ್ಡ ಮನುಷ್ಯರ್ನ double ದಬಾಯಿಸಿದ್ದೇ ಹೊರ್ತು . . . ನಿನ್ನ ಬಿಟ್ಕೊಟ್ಟೇನೇ ಶಾಸ್ತ್ರೀ ? (ಕಿಸೆಯಿಂದ Mail paperನ ಹೊರ ಹಾಕಿ ಶಾಸ್ತ್ರಿ ಕೈಯಲ್ಲಿಟ್ಟು) ಶಾಸ್ತ್ರೀ ಇದು ಅನ್ಯೋನ್ಯ. . . . ಅರ್ಥವೇ ?

ಶಾಸ್ತ್ರಿ : ಸಾರ್ ! ಅನ್ಯಾಯ ಸಾರ್ ! ಅನ್ಯಾಯ ಬುದ್ಧಿ ತಮ್ಮದು !!

[Exit Pillu Rao]

ಬದರಿ : Do you see doctor? ನಾವುಗ್ಳೆಲ್ಲಾ ಇಷ್ಟರಮಟ್ಟಿಗೆ ಕ್ಲಬ್ನ, one for all ; all for one . . . ಹೀಗೆ organise ಮಾಡಿ . . . presidentಉ, committee, membersoo

ಹೀಗೆಲ್ಲಾ arrange ಮಾಡಿದ್ರೆ . . . Strand Magazine kept back because ಮನೇ ಹಾರ್ಮೋನಿಯಮ್ ಮುರುಕ್ಲು. Mail paper not available for members . . . because correct ರಾಗ ತೋಚಲಿಲ್ಲಾ! ಹೀಗೆಲ್ಲಾ ಈ ಪಿಲ್ಲೂರಾಯ ನಮ್ಮ Multipolitan clubನ ಪುಂಗೀ ಬಾರ್ಸ್ರೋ ಹಾವಾಡಿಗ ಹಾವನ್ನ ಫಿರಾಯ್ಸೋ ಹಾಗೆ . . . ನಮ್ಮನ್ನೆಲ್ಲಾ . . . ಫಿರಾಯ್ಸೋಕೆ . . . ! . . . ಆ !

ವೆಂಕಟೇಶ್ : Why not get him transferred I say ?

ಸುಬ್ಬಣ್ಣ : ಪ್ರಯೋಜನ್ವೇನು ! . . . some other districtoo! ಅಲ್ತಾನೇ ಏನೂ . . . some other cluboo . . . and some other membersoo . . . same victimisation as us . . . ಒಟ್ನಲ್ಲಿ we are all martyrs to Pilludom !!

ವೆಂಕಟೇಶ್ : ಹೌದೂ . . . ಪಿಲ್ಲೂ . . . public pestoo . . . ! But so is plagueoo . . .! Let us forget him !. . . ನೆನ್ನೆ Press telegramsoo . . . oh ! here is Sastry.

ಶಾಸ್ತ್ರಿ : (ಮಡಿಸಿದ Mail paperನ್ನು ವಿಸ್ತರಿಸಿ ಮೇಜಿನ ಮೇಲಿಟ್ಟು) . . . ಕ್ಷಮ್ಸಿ! Sirs ! ಬಂದ್ಬಿಟ್ತು Mail paperoo !

[Herein enter Aswatha & Ranganna]

ರಂಗಣ್ಣ : Come straight in, dear boy . . . (ಮೇಜಿನ ಸುತ್ತಲೂ ಕುಳಿತುಕೊಂಡಿರುವ ಆರು memberಉಗಳಿಗೆ ಒಟ್ಟಾಗಿ introduce ಮಾಡುತ್ತಾ)

My friend Aswath you know, gentlemen !

My friends you know, Aswath !

[The sextette at the table arise and bow to Aswath's bowing, and resume their absorption in the papers.]

ರಂಗಣ್ಣ : Come on dear boy [leads him to a teapoy with chairs around. The two seat themselves.] ಶಾಸ್ತ್ರೀS . . . (Sastry comes up with a 'Sir?') ಏನ್ tiffinನ್ ಊ?

ಶಾಸ್ತ್ರಿ : ಇಷ್ಟೊತ್ತಿಗೇ? ಏಳೂವರೆ ಆಗ್ತಾ ಬಂತು! ಆದರೆ ಮಹಾಸ್ವಾಮಿ ತರ್ಸೇ ಬಿಡ್ತೇನೆ ತಡ ಇಲ್ದೆ . . ಬುಳ್ಳೂ ಭವನ್ ಇದೆ ಪಕ್ಕದ್ಲೇ ! coffee. . . tea. . . ಇಲ್ಲಾ. . . crushಗಳೋ?!

ಅಶ್ವತ್ಥ : ಇದೇನ್ರಂಗೂ ! ನಿಮ್ಮ್ ಟವನ್ನಲ್ಲಿ ದಿನಾದಿನಾ ದುಡ್ಡು ಕಸಬ್ನ ಮರ್‍ಯೋಕೆ ನಿಮ್ಕ್ಳಬ್ನಲ್ಲಿ brainಗೆ restoo, recreationooಅಂಬೋದ್ನ demonstrate ಮಾಡೋಕೆ ಕರ್‍ಕೊಂಡ್ಬಂದ್ನನ್ಗೆ. . . tiffin ಏನೂ ? tea ಏನೂ ಇಷ್ಟೊತ್ಗೆ !?

ರಂಗಣ್ಣ: All right Aswath (to Sastry) two crushesoo orangeoo . . .!
[Sastry brings two glasses and two aerated "crushes" and an "opener", opens the bottles and empties them into the glasses and departs.]

ಬದರಿ : ಇಂಗ್ಬಾರ್ ಸಂಪತ್ತೂ ! concrete test ಪಣ್ಣಿಂದೂ ನಾನೆ. ಇನ್ supervisingಓ ಎಣ್ಡೆ overseerಉ. ಕಣ್ರೆಪ್ಪೆ ಮುಚ್ಚಾದೆ ರಾತ್ರಿ ಪಗಲು ಕುಕ್ರಿಚ್ಕೊಂಡು ಇರ್ನ್ದಾನು breachಆನ bridge ಮೇಲೆ, ಇತ್ತ precautionsಕೂ ಪಂಗ್ನಾಮ ಹಚ್ಚಿದ್ದೂ ಅಲ್ದಾದೆ ಎಂಗಲ್ಡೆ department departmentಕೇ ಗೂಟ್ನಾಮು ಹಚ್ಚಿಕ್ರಾನೇ ಇಂದ contractor ಬಡ್ಡಿ ಹೈದೂ! ಇಪ್ಪೊ ಎಣ್ಡೆ position ಎನ್ನಾ. . . before portfolio ministeroo !

ಸಂಪತ್ : ಬದ್ರೀ, ಉಂಡೇ affairsಓ public affairsoo ; ಪಾಳಾಯ್ ಪೋಗುಟ್ಟುಂom !! ಎಂಡೆ private affairs ಕೇಳು ಬದ್ರೀ ? Best of materials ತರ್ವಿಚ್ಕೊಂಡು . . .

beautiful mansion ಕಟ್ಟೊಂಡೇ ಮಲ್ಲೇಶ್ವರತ್ತ್ಲೇ ! ಎನ್ಕುಂm ಬಾಳೆ ಹೊನ್ನೂರ್ ಪಕ್ಕುಂm . . . ಕಳಸಾ . . . ಅನ್ವಕ್ಕು ತೆರಂಜಿಕ್ರದೆ ಉನ್ಕು ಮಲೆನಾಡು, mosquito curtain ಸಮೇತಂ ಪೋಯಿಕ್ರಪ್ಪೊ . . . ಮನೇ ಬಾಡಿಕ್‌ಗೇ ಕುಡ್ತಾಕಾಲೇ . . . ಎಂಡೇ ಬಡ್ಡೀ tenantsಉ . . . ಮುಂದಿನ್ drawing room ಕೋಣೆ ಗೋಡೇಲೆ . . . ಗೂಟಂಗ್ಳು . . . ಗಜ ಗಜುದ್ದೂಂm ಗೂಟಂಗ್ಳು, ಬಡಿಚ್ಚೊಂಡು ಪಗ್ಗಂಗಳ್ ಕಟ್ಟೊಂಡು . . . ಪಡ್ವೆ ಪಾವಾಡೆ ಒಣತ್ಕೊಂಡು ! ಇರ್ಕಟ್ಟು!! ಎಂಡೇ special glazed sunlight terrace ಇಕ್ರದೇ, ಮೂರ್ನೇ ಮಹಡಿ . . . ಆದ್ಮೇಲೆ ಹಪ್ಪಂಗೋಳ್ ಹಚ್ಚಿಂದೂಂm ಹಚ್ಚಿಂದೇ . . . ಸಂಡ್ಗೇಗಳ್ ಒಣ್ತಿಂದೂಂm ಒಣತಿನ್ದೇ! ಇನ್‌ಮಾದ್ರಿ ಮಣ್ಣಾಪ್ಲಾಜ್ಞೊ ಎಂಡೇ mansionಉ? . . . ಇನ್ನೂ ಎಂಡೇ garden ಪಟ್ಣಗೋಳ್ ಕೇಳು. ಮಾಂಗಾಮರೂಂm ಇಕ್ರದೇ ಕಸಿ ! ಎಂಡೇ ಬಂಗ್ಲೇಲ್ ಇಕ್ರ ಮಾಂಗಾ ಮರೂಂ . . . ಗಂಗಾಪಾಣಿ ತೇಂಗಾ ಮರೂಂ . . . ಮಗ್ಗಲೇ ಇಕ್ರದು ಮಾಂಗಾ ಮುರುಂm . . . ಕಸೀ ಮಾಂಗಾ ಮರೂಂ Mysore Stateಲ್ಯೇ ಇಲ್ಯಾದ ಅದ್ಭುತ ಮಾಂಗಾ ಮರುಂm. . . . ಇನ್ ಮರೊಂm ಕಾಯ್ಬಿಟ್ಟಿರಂದಾಲೆ ಎಂಡೇ ಬಡ್ಡೀ tenants ಹೈಕ್ಳೂ ಅಂದ್ಮರೂಮ್ ಹತ್ತಿಂದೂ ಹತ್ತಿಂದೇ ಹಾರಿಂದೂ ಹಾರಿಂದೇ ! ಕೊಂಬೆ ಕೊಂಬೇ ಮುರಿಂಜ್ಬೋನಾಲೂಂm ಎಗ್ರಿಂದೂಂm ಎಗ್ರಿಂದೇ ! ಇನ್ನೂ, ಖಾರ್ಪುಡಿ ಪೋಟ್ಟೊಂಡು, ಕಾಯೀ, ಹಣ್ಣೂಂ ಹೀಚ್ ಸಮೇತ ಬಾಕಿ ಇಲ್ಲಾದೆ ಸರ್ವಮೂ, ಗದಕಿಂದೂ ಗದಕಿಂದೇ !!

ವೆಂಕಟೇಶ್ : ಏನ್ Subboo ? ನಾನು D.M.O., ಆದ್ರೂ . . . only through circumstancesಊ . . . happy marriageಊ . . . father-in-laws money . . . ಇವೆಲ್ಲಾ, saw me through. ಅಲ್ಲದೆ ನೀನು anatomy, physiology, histology ನನಗೆ coach ಮಾಡಿದೆ!, . . . because and only because ನಿನ್ನ father-in-law . . . did not see YOU through! . . . never mind ಈಗ ನನ್ನ position ನೋಡೋ . . . !!

ಸುಬ್ಬಣ್ಣ : What is it ?. . . go ahead !, fire away !

ವೆಂಕಟೇಶ್ : ನೋಡು Subboo ! Patientಉ wrestlerಊ ! beautiful body but ಗಾಂಜಾ addictಉ ! ನಾನು ಸೊರಬದಲ್ಲಿ Assistant Surgeon ಆಗಿದ್ದಾಗ ಬಂದ patientಉ ! Right leg at knee, gangrene ! ಮಾಡೋದೇನೂ ?, ನಿನಗೂ ಗೊತ್ತು ನನಗೂ ಗೊತ್ತು !, amputation ! ಕುಸ್ತೀ career out off ! warn ಮಾಡ್ದೆ "ಗಾಂಜಾ ಬಿಡೂ! ಬದಕ್ತೀಯಾ!, ಇಲ್ಲಾ limb limboo ಹೋಗ್ತಾಯಿರುತ್ತೀಂ"ಅಂತ Again ನೋಡೋ, at Tumkur ತಿರ್ಗೂ ಬಂದಿದಾನೆ !! Same ಗಾಂಜಾ, same gangrene but left legoo ; same amputationಉ at left knee !! ಆಯ್ತೀ ! When I was in Nanjangud,–ಅತ್ಕಡೆ peopleoo horribly uneducatedoo !— ಅತ್ಕಡೆ ಇತ್ಕಡೆ cholera ಇತ್ತು, sporadicಉ !, But importedಉ But then the local illiterate foolsಉ who suffered from diarrhoea, mistook it for cholera and voluntarily died !! A clean case of Mass-follows-de-so ! ನನಗೋ ಸತ್ತ್ ಶೋಧ್ನೇ post-mortem ಗಲಾಟೆ ಏತನ್ಮಧ್ಯೆ the same ಗಾಂಜಾ gangrene patientಉ ಒಂದು wheel-barrow ಮೇಲೆ push ಮಾಡಿಸ್ಕೋತಾ ಬಂದ, with both arms gangrene troubled! As per usual amputation !! This was two years ago ! ಈಗ್ನೋಡು Subboo, ಈವತ್ಬಂದಿದ್ದಾನೆ the same old patientಉ, legless, and armlessoo, but with gangrene on the trachea working into the aesophagus ! . . . of course ನನ್ನ duty amputation of headoo ! But medical jurisprudence ! Gribble & Hiheir ಎಲ್ಲಾ ತಿರ್ವಿ‌ತಿರ್ವಿ ಓದ್ದೆ. . . Subboo ! to save him from gangrene. Neck amputation ಮಾಡಿದ್ರೆ legal troubleಉ, ಏನಾದ್ರೂ ಉಂಟೇ ಇಲ್ವೇ ? Public D.M.O. ನಾನು ! Thirty years serviceoo !, pension, provident fund plus insurance impending ಇನ್ನು one yearನಲ್ಲಿ . . . ಏತನ್ಮಧ್ಯೆ ಇದು, my operation of gangrene at the throatoo!, riskಉ patientದು and amputation of the headoo certain deathoo ! Clear duty ಒಂದ್ಕಡೆ !, certain death ಅತ್ಕಡೆ ! ಈಗ ನಾನು D.C.ನ consult ಮಾಡೋದೇ, D.S.P.ನ್ನೇ ಇಲ್ಲಾ . . . public prosecutorನ್ನೇ ? ಇಲ್ಲಾ

patientನೇ discharge ಮಾಡಿ, Chief Surgeon ರೇಗಿ, dismiss ಮಾಡಿಸ್ಕೊಳ್ಳೋದೇ? and myself, family ನಡ್ಬೀದೀಲೇ ? !! advise me dear boy !

ಸುಬ್ಬಣ್ಣ : ನಿನ್ನ predicamentoo peculiaroo. . . Prospectsಓ ನಿನ್ನ problem ನೋಡ್ದ್ರೇ precariousoo. My best adviceoo is for you to take a trip to Bullappaನ ಹಳ್ಳಿ. Three cases of ptomaine poisoningoo. Twentytwo into two, forty four milesಉ plus three day's haltage. T.A.ನೂ ಆಯ್ತು. ತಿರುಗಿ ಬರೋವಷ್ಟ್ರಲ್ಲಿ gangrene patientಏ ಗೋತಾ !!! What do you think. . . good idea ಅಲ್ಲವೆ?

ವೆಂಕಟೇಶ್ : Dear boy ! ಬದಕ್ದೆ ನಾನು ! Thanks to you ! But then let me congratulate you . . .ನಾನು M.B.B.S.ಉ . . .Mysore double Bahadur serviceಉ . . . ನಾನಾದ್ರೂ . . . ನನ್ಗತಿ ಹೀಗೆ. ನೀನೋ a common or garden L.M.P. ಅಂತ ನಾನ್ ತಿಳ್ಕೊಂಡಿದ್ದೆ–"Licensed to Murder Promiscuously" ಅಂತ ! But I hear you are minting money ! . . more than I the D.M.O. !!

ಸುಬ್ಬಣ್ಣ : ಕ್ಷ್ಷ್ ! ಹುಷಾರೋ ! ಬೆಪ್ಪೂ ! Income tax officerಊ ಆತ ! ಆತನ್ ಕಿವಿಗೇನಾದ್ರೂ ಬಿದ್ರೋ ಬೀಳುತ್ತೆ ಬರುಡೇಗೆ !

ವೆಂಕಟೇಶ್ : Ohh !. . . I . . . understand !...

* * *

ಶೇಷು : But, ಅಹೋಬ್ಳು ! Circumstancesಉ alter casesಉ ! So also circumstantial evidenceಉ !!

ಅಹೋಬ್ಳು : ಇರಬಹುದು ಶೇಷು ! But then ನಮ್ಮ professionಲಿ ಮರೀಬೇಡ ! circumstantialitiesಉ in point of evidenceಉ . . . not only alter criminal casesಉ ! But also alter ಆಗೋ ಗಲಾಟೀಲಿ, client ಕುತ್ತಿಗೇಗೇ halterನೂ ಸಲ್ಲಿಸುತ್ತೆ ! Therefore. . . . . . you never . . . know where your client is. But as a lawyer take care to know where you are ! . . . I mean fees firstoo. . . became ನಮ್ಮ law, is the only profession in worldಉ wherein the professional may not sue his client for services rendered !! Therefore ನೀನಾಯ್ತು ನಿನ್ನ ಫೀಸಾಯ್ತು, ಆಮೇಲೇನೇ . . . client ಆಯ್ತು ಅವನ Judge ಆಯ್ತು ! . . . . ಕೇಳು ನಿನ್ನ Principleoo : principle firstoo ! principle lastoo !!

ಶೇಷು : Bye the bye ಅಹೋಬ್ಳು . . . open and shit caseಉ . . . so far as prosecuting evidence shows . . . Prima facie Witnessoo ! ಮಾಲು ಕದ್ಕೊಂಡ್ಹೋದ್ದು record ಆಗಿಧೆ. Still . . .ಅದ್ಹ್ಯಾಗೆ ನಿನ್ನ clientನ acquit ಮಾಡ್ಸ್ಕೊಂಡೆ ? wonderful brainoo ನಿಂದು ! ಅನ್ಯಾಯ grey matter ನಿನ್ನ್ ಕ್ರೇನಿಯಂನಲ್ಲಿ !

ಅಶ್ವತ್ಥ : ನನ್ Craniumನ grey matter ಅಲ್ಲ . . . that stood me in good stead. Magistrate craniumನಲ್ಲಿ ತುಂಬ್ಕೊಂಡಿದ್ದ adi-pose matteroo empty fatಉ !, ಬರೀಕೊಬ್ಬು !, ಕುಚೋದ್ಯ !, ಕಿಲಾಡಿತನ! ಅದ್ನ advantage ತೊಗೊಂಡೆ ನಾನು ! ಬದಕ್ದೆ ! ಬದಕಸ್ದೆ ಕಕ್ಷಿಗಾರನ್ನ! ಕಳ್ಳ of course !. . . But then law is law despite justice being justiceoo. Details ಕೇಳು ! ಮಟ್ಮಟ್ಮಧ್ಯಾಹ್ನ ! ಮನೇಲಿ ಅಮ್ಮಾವ್ರು; ಯಜಮಾನ್ರಾಫೀಸ್ಲಿ ; ಮಕ್ಳು ಸ್ಕೂಲ್ಲಿ ; ಜವಾನ ಹೋಗಿದಾನೆ ಊಟಕ್ಕೆ; ಬಾಗಿಲು ತೆಗಿದಿದೆ; Situationನ . . . many many previous studiesನಿಂದ study ಮಾಡ್ಕೊಂಡಿದ್ದ ನನ್ಕ್ಲೈಂಟು . . . also a professional in his line, which is all breadth and no lengthಉ . . . cool ಆಗಿ went in !, quiet ಆಗಿ drawing room table ಮೇಲೇ ಇಟ್ಟಿದ್ದ ಕಾಸಿನ ಸರಾನ ಬಲಗೈ “ತೋರ್ಬೆಟ್ಟಿಗೆ” ತಗ್ಲಿಸ್ಕೊಂಡ . . . ತೆಪ್ಪನ್ ಹೊರಕ್ಬಂದ !,

gateooದಾಟ್ದ. . . Public roadoo ತಲ್ಪ್ದ; ಹೊರಗೆಲ್ಲೋ ಸಂಚರ್‍ಸಿತಿದ್ದ ಅವರ್ಮನೆ bull dogoo ಬಂದು ಒಂದೇ ಧುಮ್ಕು . . . . attached itself to my client's calfoo ಪಕ್ಕದ್ಬಂಗ್ಲೆ ಆಕೆ with her servants ಹೊರಕ್ಬಂದು scene ನೋಡಿಧಾರೆ. ಕಾಲನ್ನ ಕಚ್ಕೊಂಡಿದೆ bull dogoo. ಬಲಗೈ ತೋರ್‍ಬೆಟ್ನಲ್ಕಾಸಿನ್ಸರ ತೂಗಾಡ್ತಿದೆ ! An open and shut case . . . prosecutionಗೆ !; clientಓ advance ನಾನೂರು ರೂಪಾಯಿ ನಗದು ನನ್ಕೈಲಿಟ್ಟು acquit ಅದ್ರೆ 600 ರೂಪಾಯಿ ಕಾದಿದೆ ಅಂದ ! I was on velvetoo in any caseoo !, so far as feesoo ! But then, so far as my reputationoo as criminal lawyeroo, not on vel-vetoo! I found myself climbing up and down on a ಮುಳ್ಳುಮುತ್ತುಗ್ದ ಮರ, ದೇವರ್‍ದಯ ! . . . Judgeಓ !! with a reputation for joking!, witticisms etc. etc. !, advantage ತೊಗೊಂಡೇ; ಕೇಳು ನನ್ನ summing upoo. . . "your honour, despite the overwhelming evidence adduced by the prosecution, I feel that this whole case depends upon one principal based on equity which in itself is the basis of all law. May I put it to your honour, in all humility, a problem ? Hypothetically assuming.... that a single member of a community, an assembly or a club or a body of members commits a cognisable act against law, would your honour incarcerate the whole community, assembly or a club or a body of members, as the case may be ?" ಜಡ್ಜಿ ಹೇಳ್ತಾನೇ--"Not at all, learned counsel! No public body of members may be inculpated for any misdemeanour of a single integrant member". . . ಸಿಕ್ತು ಸುಬ್ಬು. . . pointoo ನನ್ಗೆ ! ಹೊಡ್ದೆ. . . ""I welcome the words 'body and member' in your honour's just and wise dictum.

My client is a body of members. It may seem childish to quote that the oldest of authorities is Æsop of the Fables fame. Nevertheless, my client is a body of members. The prosecution evidence has proved that but one member of his body, to wit, his right fore-arm, bore away exhibit No.1 , ಕಾಸಿನಸರ. On your honour's own asseveration, would it be justice to imprison the whole body of my client for a criminal act of but one of the members that make up his

body ?”–ಅಂದೇ!. . . –ಅವ್ನೋ, brainy ! twinkling eyesoo! Sneering lipsoo ! sarcastic tongueoo! . . .ಹೇಳ್ತಾನೆ !.. . . . “I quite appreciate your point, learned counsel, without going a syllable back on whatever I have averred before, I sentence the fore-arm of the prisoner in the deck to six months’ rigorous imprisonment. If the rest of the members that make up the body of your client cannot help sympathetically following their erring fellow member, that would be no fault of this court !”. . . ಜಡ್ಜ್‌ಮೆಂಟ್ ಕೇಳುತ್ಲೂ, ಕೋರ್ಟ್ ಕೋರ್ಟೆ ನಗತ್ತೆ ನನ್ನೋಡಿ ! ; But ಕೊನೇ ಹಾಸು ಆಡಿದ್ದು ಜಡ್ಜಿ ! . . . . goodoo. But ಕೊನೇ ತುರುಫ್ ಕರ್ಚಿ ನನ್ಕೈಲಿ ! Sweet ಆಗಿ ಸೋಕಿಸ್ದೆ ! ತುರುಫ್ ಖರ್ಚೀನ ಜಡ್ಜಿ ಹಾಸಿನ ಮೇಲೆ ! ಗೆದ್ದೆ ಕೇಸ್ನ ! ಆಗ್ನೋಡಬೇಕಾಗಿತ್ತು ನೀನು ಕೋರ್ಟಿನವರ ಮೂತೀನ ! ಒಟ್ನಲ್ಲಿ ಆ ಆರ್ನೂರ್ರೂಪಾಯೂ ಸೇರ್ತು current accountಗೆ !!

ಶೇಷು : ಅರ್ಥವಾಗ್ಲಿಲ್ಲ ! fore-arm ಜೊತೇಗೆ . . . rest of the body clientದು, ಹೇಗ್ತಾನೆ follow ಮಾಡ್ಲಿಲ್ಲ ??

ಅಹೋಬ್ಳು : ನನ್ಕ್ಲೈಂಟೂ . . . ಗಾಂಜಾ friendಉ ; an old patient of the self same doctoroo the... ಗಾಂಜಾ amputation specialistoo forearm ಕಟಾಯಿಸ್ಕೊಂಡು corkನಲ್ಲಿ ಮಾಡ್ದ ಪ್ರಾಂಶ ಬಾಹು ! ಕೊನೇಗೆ ಉಕ್ಕಿನ ಕೊಕ್ಕೆ ಸೆಕ್ಸಿದೆ !! ನನ್ನ last wordsಉ ಆ ಕೋರ್ಟ್‌ನಲ್ಲಿ ! Prisoner’s dockoo ಸಮೀಪಿಸ್ತಾ “I abide by your honour’s edict pregnant with forensic erudition” ಅಂತಾಲೇ, ಈ cork forearmನ buckles ಬಿಚ್ಚಿ ಆ constable ಕೈಲಿ ಕೊಟ್ಟು clientನ Support ಮಾಡ್ತಾ court ಹೊರಗಡೆ ಹೊತ್ಕೊಂಡ್ಬಂದೆ clientನ. . .! ಆ ಆರ್ನೂರ್ರೂಪಾಯಿ ಸಿಲ್ಕಗೆ ! ತಿಳೀತೇ ಈಗ !!

ಶೇಷು : ಸತ್ಯವಾಗಿ ಹೇಳ್ತೇನೆ, ಅಹೋಬ್ಳು, ಇದು ಒಳ್ಳೇದಕ್ಕಲ್ಲ ! ವಿನಾಶಕಾಲೇ ವಿಪರೀತ.

ಅಹೋಬ್ಳು : “ಬುದ್ಧಿಃ” ಅಂತೀಯಾ. ಅದೂ ಜಡ್ಜಿ ಹಣೇ ಬರಹ ! ನನಗಿರೋ ಹೆದರಿಕೆ “ಸಿದ್ಧಿಃ”! ಅಂತ ಆಗಿದೆಯೆಲ್ಲಾ ಅಂತ !!

* * *

[ಇದುವರೆಗೂ ಜರುಗಿದ ಜೋಡಿ ಜೋಡಿಗಳ ಸಂವಾದ ಸಂಭಾಷಣೆಗಳು ಕಿವಿಗೆ ಬೀಳಲು ರಂಗಣ್ಣನು ಪೆಚ್ಚಾದ ಮುಖವನ್ನು ತಿರುಗಿಸಿಕೊಳ್ಳುತ್ತಲೂ, ಅಶ್ವತ್ಥನು ತುಂಬಿ ತುಳುಕುತ್ತಿರುವ ನಸುನಗುವನ್ನು ನುಂಗುತ್ತಲೂ, ಕೊನೆಗೆ ಜೋಲು ಮುಖವನ್ನು ತೂಗುವ ರಂಗಣ್ಣನಿಗೆ ಅಶ್ವತ್ಥ]

ಅಶ್ವತ್ಥ : ರಂಗೂ ! ಎರಡ್ಲಾಯ್ರಿ ; ಎರಡ್ಡಾಕ್ಟ್ರು ; ಎರಡಿಂಜಿನೀರು ; ಹಿಗ್ಗೀಗೆ ಸಂತೋಷವಾಗಿ ಅನ್ಯೋನ್ಯವಾಗಿ ಅವ್ರವ್ರ ಕಸಬ್ನ ಮರ್ತು ಪರಸ್ಪರ ಪ್ರಶಂಸೆ ಸಂದೀಲಿ ಸ್ವಸ್ವಸಮಾರಾಧನೇನ ಸಲ್ಲಿಸ್ಕೋಳೋ ಸಂಭ್ರಮದಲ್ಲಿ . . District Districtಗೆ ಎರಡ್ಡಿಸ್ಟ್ರಿಕ್ Munsiffಗ್ಳು, ಎರಡೆರಡು D.C.ಗ್ಳನ್ನ ನಮ್ಮನ್ನಾಳುವ ಮಹಾಸ್ವಾಮಿಗ್ಳು ಏರ್ಪಡಿಸೋವರ್ಗೂ, District Magistrate D.C.ನೂ District Munsiff ನೀನೂವೇ Hopelessಲೀ isolated, ಇಲ್ಲಾ insulatedಉ ? ಈ ನಿನ್ಕಲ್ಬೆಗ್ಗೆ ನನ್ನ ಇಲ್ಲಿ ಕರ್ಕೊಂಡ್ಬರೂವಾಗ್ಲೆ ನನಗೆ guarantee ಮಾಡ್ದ Mental Recreationನಿಗೆ, ನನ್ನಾಗ್ಗೆಯೇ . . . ಇನ್ನೊಬ್ಬ . . . merchantನ member ಮಾಡ್ಕೊಂಡು . . . “ಮೆಣಸಿನಕಾಯಿ ಬೆಲೆ ಎದ್ದಿದೆಯೇ ? ಇಳ್ದಿದಿಯೇ? ಕಾಫೀನ ಕರ್ಣಾಟಕರ್ಗೇನೇವೆಯೇ ಒದಗ್ಸಿದ್ರೆ ನನ್ನ Current account ತುಂಬುತ್ಯೇ ? ಇಲ್ಲಾ outside ಕರ್ಣಾಟಕ export ಮಾಡಿ current accountನ fixed depositಗೆ ಏರ್ಸ್ಪೋದೇ ! ಹೀಗೇವೇ ರಂಗೂ, you find another District Munsiffಉ for mental recreation . . . to discuss shop” with you and enjoy this cluboo !
In the meanwhile I also shall try and find a fellow merchant to discuss merchandise with me ! And then, dear boy, this will really be a multipolitan club !!

[ಎನ್ನುತ್ತಾ “MULTIPOLITAN CLUB” ಎಂದು ಗೋಡೆಯ ಮೇಲೆ ತಗಲಿ ಹಾಕಿರುವ ನೋಟೀಸನ್ನ ತೋರು ಬೆಟ್ಟಿನಿಂದ ತೋರುತ್ತಿರುವಲ್ಲಿ ಫರದೆಯು ಕ್ರಮೇಣ ಜಾರುವುದು]

ಇತ್ತೀಚೆಗೆ ಪ್ರಕಟವಾದ ಜನಪ್ರಿಯ ಪುಸ್ತಕಗಳು

	ರೂ.
ಡಾ|| ಡಿ. ವಿ. ಗುಂಡಪ್ಪ (ಡಿ.ವಿ.ಜಿ.)	
ಶ್ರೀಮದ್ಭಗವದ್ಗೀತಾತಾತ್ಪರ್ಯ ಅಥವಾ ಜೀವನಧರ್ಮಯೋಗ	೩೦೦
ಮಂಕುತಿಮ್ಮನ ಕಗ್ಗ-೧	೬೦
ಮರಳು ಮುನಿಯನ ಕಗ್ಗ-೨	೫೦
ಬಾಳಿಗೊಂದು ನಂಬಿಕೆ	೪೦
ಅನ್ತಃಪುರಗೀತೆ	೮೦
ಶೃಂಗಾರಮಂಗಳಂ	೪೦
ಶ್ರೀಕೃಷ್ಣಪರೀಕ್ಷಣಂ	೯೦
ಜ್ಞಾಪಕಚಿತ್ರಶಾಲೆ ೧ ರಿಂದ ೮ ಭಾಗಗಳು	೪೭೫
ಡಾ||ಬಿ. ಜಿ.ಎಲ್. ಸ್ವಾಮಿ	
ನಡೆದಿಹೆ ಬಾಳೌ ಕಾವೇರಿ	೧೩೫
ತಮಿಳು ತಲೆಗಳ ನಡುವೆ	೭೦
ಪ್ರಾಧ್ಯಾಪಕನ ಪೀಠದಲ್ಲಿ	೫೫
ಕಾಲೇಜು ತರಂಗ	೧೩೫
ಹಸುರು ಹೊನ್ನು	೧೬೦
ತ.ರಾ.ಸು.	
ದುರ್ಗಾಸ್ತಮಾನ	೨೧೦

ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ	೩೦೦
ಕಸ್ತೂರಿಕಂಕಣ	೧೫೦
ನಾಗರಹಾವು, ಎರಡು ಹೆಣ್ಣು ಒಂದು ಗಂಡು, ಸರ್ಪಮತ್ಸರ	೧೨೫

ಡಿ. ವಿ. ಜಿ. ಸಾಹಿತ್ಯಸಿರಿ–ಹಾ. ಮಾ. ನಾಯಕ	೭೫
ಹೈದರ್ ಅಲಿ–ಅಬ್ದುಲ್ ಸತ್ತಾರ್	೧೨೫
ಅಮರಕೋಶ ೧, ೨, ೩–ರಂಗನಾಥ ಶರ್ಮ	೧೩೫

ಮಕ್ಕಳಿಗಾಗಿ ಹೊಸ ಪ್ರಕಟನೆಗಳು

(ಕಥೆಗಳು, ಹಾಡುಗಳು, ನಾಟಕಗಳು)

	ರೂ.
ಜಡಭರತ ಮಹರ್ಷಿ	೨೫
ಅಭಿಮನ್ಯು	೨೦
ಕರ್ನಾಟಕದ ವೀರರಮಣಿಯರು	೨೫
ಸಮರ್ಥ ರಾಮದಾಸಸ್ವಾಮಿಗಳು	೨೫
ಚಿತ್ತೂರು ರಾಣಿ ಪದ್ಮಿನಿ	೨೫
ಚಾವುಣ್ಡರಾಯ	೨೦
ಶ್ರೀ ಕೃಷ್ಣದೇವರಾಯ	೨೫
ನೂರ್ ಜಹಾನ್ ಬೇಗಂ	೨೫
ರೋಗ್ಯ ವಿಧಾನ ಪ್ರಕಾಶಿಕೆ	೧೫
ಮಹಾಭಾರತದ ಕತೆಗಳು	೨೫
ಪೇಟೆಮಾತೇನಜ್ಜಿ	೨೫
ಮಾಲಂಗಿಮಡು	೧೦
ಧರ್ಮಾನುಗ್ರಹ	೧೫
ರತ್ನ ಸಿಂಹಾಸನ	೧೫
ಗುರುದಕ್ಷಿಣೆ	೨೦
ಬಾಲ್ಯ ಎಲ್ಲಿದೆ ?	೨೦
ಮಹಮೂದ್ ಗವಾನ	೩೦
ಕಾಮನು ಬಿಲ್ಲು	೪೦
ಪರಿಸರ : ಅಂದು-ಇಂದು	೫೦
ಡೊಂಬರ ಚೆನ್ನೆ	೩೦